Mr. SPEAKER.—The question is:

"That in Sub-Clause (*a*) for the figure "3" the figure "4" shall be substituted".

The amendment was negatived.

Mr. SPEAKER.—The question is:

"That this House agrees with the 20th Report of the Business Advisory Committee."

The motion was adopted.

MEMBER'S REPRESENTATION

†Sri M. C. NARASIMHAN.—Before we take up the next item, i.e., further discussion on the Land Reforms Bill, I should like to submit that according to rule 28 for every 14 days of official business one day has to be allotted for the non-official business. So far no day has been allotted for the non-official business. The second difficulty is, according to the Business Advisory Committee Report, we have to carry on legislative business upto 10th of this month. I understand as it stands at present, the business has to come to a close by the 9th of this month. So, there is every chance of our losing non-official business.

Mr. SPEAKER.—We are sitting longer.

Sri M. C. NARASIMHAN.—So, this will not be lost.

Mr. SPEAKER.—No.

MYSORE LAND REFORMS BILL 1961 AS REPORTED BY JOINT SELECT COMMITTEE

—*Motion to consider*—Debate *contd.*

ಶ್ರೀ ಬಿ. ಜಿ. ಖೋತ್ (ಸಾದಲ್ಗ).—ಮಾನ್ಯಅಧ್ಯಕ್ಷರೇ, ಈ ವಿಷಯವನ್ನು ನಮ್ಮ ಮುಂದೆ ಚರ್ಚೆಗೆ ತಂದಿರುವುದು ಇದು ಮೂರನೆಯ ಸಲ. ಪ್ರಾಯಶಃ ಈ ವಿಷಯದಲ್ಲಿ ಇದು ಆಖೈರು ಸಲ ಎಂದು ಕಾಣುತ್ತದೆ. ಅಗ್ರೇರಿಯನ್ ರಿಫಾರ್ಮ್ಸ್ ವಿಷಯ ಹೊಸದಲ್ಲ. 1933ನೇ ಇಸವಿಯಿಂದ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಯಾವಾಗ ರೆಸಲ್ಯೂಷನ್ ಅಡಾಪ್ಟ್ ಮಾಡಿಕೊಂಡಿತ್ತು, ಅಲ್ಲಿಂದ ಹಿಡಿದು 1961ನೇ ಇಸವಿಯತನಕ ಅದರ ದೆಸೆಯಿಂದ ಬೇರೆಬೇರೆ ಹಂತದೊಳಗೆ ಆ ಕಾರ್ಯ ನಡೆದುಕೊಂಡು ಬಂದಿದೆ. 1933ನೇ ಇಸವಿಯಲ್ಲಿ ರೆಸಲ್ಯೂಷನ್ ಅಕ್ಸೆಪ್ಟ್ ಆದಮೇಲೆ 1949ನೇ ಇಸವಿಯೊಳಗೆ ಒಂದು ರಿಪೋರ್ಟ್ ಆಯಿತು. ಆ ಅಗ್ರೇರಿಯನ್ ರಿಫಾರ್ಮ್ಸ್ 1933—1949ರೊಳಗೆ ಏನು ರಿಪೋರ್ಟ್ ಆಯಿತು, ಅದನ್ನು ಅನುಸರಿಸಿ ಬೊಂಬಾಯಿ ವಗೈರೆ ಸ್ಟೇಟಿನಲ್ಲಿ ಟೆನೆನ್ಸಿ ಆಕ್ಟ್ ಮತ್ತು ಇತರ ಸ್ಟ್ಯಾಚ್ಯುಟರಿ ಪ್ರಾವಿಷನ್ಸ್ ಎನಾಕ್ಟ್‌ಮೆಂಟ್ಸ್ ಆಯಿತು. ರೀಆರ್ಗನೈಜೇಷನ್ ಆದಮೇಲೆ 1959 ರಲ್ಲಿ ಲ್ಯಾಂಡ್ ರಿಫಾರ್ಮ್ಸ್ ಬಿಲ್ ಬಂತು. ಈಗ ಸೆಲೆಕ್ಟ್ ಕಮಿಟಿಯ ರಿಪೋರ್ಟ್ ನಮ್ಮ ಮುಂದೆ ಚರ್ಚೆಗೆ ಇದೆ.

ಲ್ಯಾಂಡ್ ರಿಫಾರ್ಮ್ಸ್ ಮಾಡುವುದರೊಳಗೆ ಎರಡು ಮುಖ್ಯ ವಿಷಯಗಳಿವೆ, ಆ ಎರಡು ವಿಷಯಗಳು ಸಾಫಲ್ಯ ಆಗಬೇಕು, ಎಂದು ಲ್ಯಾಂಡ್ ರಿಫಾರ್ಮ್ಸ್ ಬಿಲ್ ತಂದಿದ್ದು. Equitable justice to all the parties concerned with land. ಒಂದು ಉದ್ದೇಶ more agricultural production ಎರಡನೆ ಉದ್ದೇಶ. ಈ ಎರಡು ಉದ್ದೇಶ ಪೂರ್ತಿ ಆಗುವ ದೆಶೆಯಿಂದ ಲ್ಯಾಂಡ್ ರಿಫಾರ್ಮ್ಸ್ ಬಿಲ್ ನಮ್ಮ ಮುಂದೆ ಇಟ್ಟಿದೆ. more agricultural production ಆಗಿ ಫುಡ್ ಪ್ರಾಬ್ಲಮ್ ಸಾಲ್ವ್ ಆಗಬೇಕು ಹಾಗೂ ಇಂಡಸ್ಟ್ರಿಯಲ್ ಪ್ರೊಡಕ್ಷನ್‌ಗೆ ಹೆಚ್ಚು ಅನುಕೂಲವಾಗಬೇಕು ಎಂಬುದು ಮೂಲತತ್ವ ಅಥವಾ ಪ್ರಧಾನ ಉದ್ದೇಶ. ಎರಡನೆಯ ಉದ್ದೇಶ ಸೋಷಿಯಾಲಿಸ್ಟಿಕ್ ಪ್ಯಾಟರ್ನ್ ಆಫ್ ಸೊಸೈಟಿ ಆ ಉದ್ದೇಶ ಈಡೇರಬೇಕಾದರೆ ಈಕ್ವಿಟಬಲ್ ಜಸ್ಟೀಸ್ to all the parties ಟೆನೆಂಟ್ ಮತ್ತು ಲ್ಯಾಂಡ್‌ಲಾರ್ಡ್ಸ್ ಎಲ್ಲರಿಗೂ ಆಗಬೇಕು ಮತ್ತು ಒಂದು ತರಹ ಡಿಸ್‌ಪ್ಯಾರಿಟಿ ರಿಮೂವ್ ಆಗಿ ಎಲ್ಲಾ ತರಹ ಸಮಾನತೆ ಉತ್ಪನ್ನ ಆಗಬೇಕು ಎನ್ನುವುದು ಉದ್ದೇಶ. ಆ ಎರಡು ಉದ್ದೇಶಗಳ ಪೈಕಿ ಮೊದಲನೆಯ ಉದ್ದೇಶ ಈಕ್ವಿಟಬಲ್ ಜಸ್ಟೀಸ್ ಮತ್ತು ಅಗ್ರಿಕಲ್‌ಚರಲ್ ಪ್ರೊಡಕ್ಷನ್ ಇವುಗಳ ದೆಶೆಯಿಂದ ಟಿಲ್ಲರ್ ಓನರ್ ಡಾಕ್ಟ್ರಿನ್ ತತ್ವವನ್ನು ಸ್ವೀಕಾರ ಮಾಡಿದರು. ಯಾರು ಭೂಮಿಯನ್ನು ಸಾಗು ಮಾಡುತ್ತಾರೋ ಅವನು ಆ ಭೂಮಿಯ ಮಾಲೀಕನಾಗಿ ಆಗಬೇಕು ಎನ್ನುವ ತತ್ವವನ್ನು ಇಟ್ಟುಕೊಂಡು ಇದರ ದೆಶೆಯಿಂದ ಈ ಭೂಸುಧಾರಣೆಯ ಬಿಲ್ಲನ್ನು ಮಾಡಿದರು. ಸೋಷಿಯಾಲಿಸ್ಟಿಕ್ ಪ್ಯಾಟರನ್ ಆಫ್ ಸೊಸೈಟಿ ಪ್ರಸ್ತಾಪ ಆಗಬೇಕು ಮತ್ತು ಎಕನಾಮಿಕ್‌ಲ್ ಈಕ್ವಿಟಬಲ್ ಜಸ್ಟೀಸ್ ಸಿಕ್ಕಬೇಕು. ಡಿಸ್ ಪ್ಯಾರಿಟಿ ರಿಮೂವ್ ಆಗಬೇಕು ಎನ್ನುವ ಉದ್ದೇಶವಾಗಲಿ ಅಗ್ರಿಕಲ್‌ಚರಲ್ ಪ್ರೊಡಕ್ಷನ್ ಹೆಚ್ಚಾಗಬೇಕು ಎನ್ನುವ ಉದ್ದೇಶವಾಗಲೀ ಈ ಬಿಲ್ಲಿನಿಂದ ಸಾಧ್ಯವಾಗುತ್ತದೋ ಇಲ್ಲವೋ ಎನ್ನುವುದನ್ನು ಈಗ ವಿಚಾರ ಮಾಡುವುದು. ಇದೇ ಭಗೀರಥ ಪ್ರಯತ್ನವನ್ನು ಮಾಡಿ ಈ ಬಿಲ್ಲನ್ನು ತಂದು ಇದರಿಂದ ಉದ್ದೇಶ ಸಾಧನೆ ಮಾಡುವುದಕ್ಕಿಂತಲೂ ಈಗ ಇರುವ ಪದ್ಧತಿಯನ್ನು ಸ್ವೀಕಾರ ಮಾಡಿ ಲ್ಯಾಂಡ್ ಓನರ್ಸ್ ಮತ್ತು ಟೆನೆಂಟ್ಸ್, ಟಿಲ್ಲರ್ಸ್‌ಗೂ ರಿಲೇಷನ್ಸ್ ಹೆಚ್ಚು ಕೋಆಪರೇಟಿವ್ ಮತ್ತು ಹೆಚ್ಚು ಕೋಆರ್ಡಿನೇಟ್ ಮಾಡುವುದಕ್ಕೆ ಸಾಧ್ಯವಾಗುವಂತೆ ಮಾಡಿದ್ದಾರೆ. ಹೆಚ್ಚು ಅನುಕೂಲವಾಗುತ್ತದೆಯೇ ಅಥವಾ ಟಿಲ್ಲರ್ ಓನರ್ ಡಾಕ್ಟ್ರಿನ್ ಸ್ವೀಕಾರ ಮಾಡಿ ಬಿಲ್ಲಿಗೆ ಅನುಸರಿಸಿ ಲ್ಯಾಂಡ್ ಓನರ್‌ಸಿಪ್ to tenants ಕೋಆಪರೇಟಿವ್ ಫಾರ್ಮಿಂಗ್ ಹೆಚ್ಚು ಮಾಡಲು ಸಾಧ್ಯವಿದೆಯೇ ಎಂಬುದು ಮೂಲವಿಚಾರ ಪ್ರಶ್ನೆ ಇದೆ. ಈ ಪ್ರಶ್ನೆಯನ್ನು ಸಾಲ್ವ್ ಮಾಡುವ ಕಾಲಕ್ಕೆ ಟಿಲ್ಲರ್ ಓನರ್ ಡಾಕ್ಟ್ರಿನ್ ತತ್ವಕ್ಕೆ ಅನುಸರಿಸಿ ವ್ಯವಸ್ಥೆ ಮಾಡುವುದಕ್ಕಿಂತಲೂ ಈಗ ಇದ್ದ ವ್ಯವಸ್ಥೆಯನ್ನು ಅನುಸರಿಸಿ ಫಿಕ್ಸಿಟಿ ಆಫ್ ಟೆನ್ಯೂರ್ ಅಷ್ಯೂರೆನ್ಸ್ ಆಫ್ ಫೇರ್ ರೆಂಟ್ ಪ್ರಾವಿಷನ್ ಮಾಡಿದರೆ ಹೆಚ್ಚು ಅನುಕೂಲವಾಗುತ್ತದೆ. ಅವರ ಉದ್ದೇಶ ಸಾಫಲ್ಯವಾಗುತ್ತದೆ.

ಅಧ್ಯಕ್ಷರು.—ಈಗ ಭೂಸುಧಾರಣೆಗಳು ವಿಧೇಯಕ ಸ್ಥೂಲ ಪರ್ಯಾಲೋಚನೆಯ ಮೊದಲನೆಯ ಘಟ್ಟವು ಮುಕ್ತಾಯವಾಗಿದೆ. ಕೆಲವು ತತ್ವಗಳನ್ನು ಒಪ್ಪಿಕೊಂಡಿದ್ದಾರೆ. ಆ ತತ್ವಗಳ ವಿಚಾರವಾಗಿ ಮಾತನಾಡುವುದಕ್ಕೆ ಆಗುವುದಿಲ್ಲ. ಈಗ ಸಂಯುಕ್ತ ವಿಶ್ವಿಷ್ಟ ಸಮಿತಿಯವರು ಏನು ಸಿಫಾರಸ್ಸುಗಳನ್ನು ಮಾಡಿದ್ದಾರೋ ಆ ಬಗ್ಗೆ ಮಾತನಾಡಿ. Fixation of tenure, ರೆಂಟ್ ವಿಚಾರ ಇವುಗಳೆಲ್ಲಾ ತೀರ್ಮಾನವಾಗಿವೆ ಆ ವಿಚಾರ ಇಲ್ಲಿ ಬರುವುದಿಲ್ಲ.

ಶ್ರೀ ಬಿ. ಜಿ. ಜೋತ್.—Provision regarding tennure fair rent, ownership to tenants, ceiling holdings ಈ ತರಹ ಮುಖ್ಯವಾದ ಪ್ರಾವಿಷನ್ ಮಾಡಿದ್ದಾರೆ. ಸೆಕ್ಷನ್ 7ರಲ್ಲಿ Restoration of possession to tenants dispossessed in certain circumstances. A person who or whose predecessor-in-title held land in any are as a tenant for a period of six consecutive years before the

(ಶ್ರೀ ಬಿ. ಜಿ. ಖೋತ್)

date specified ಎಂದು ಹೇಳಿದ್ದಾರೆ. ಹಿಂದೆ 6 ವರ್ಷಗಳ ತನಕ ಟೆನೆಂಟ್ಸ್‌ನಿಂದ ಭೂಮಿಯನ್ನು ಬಿಡಿಸಿಕೊಂಡಿದ್ದರೂ ಸಹ ಅದನ್ನು ಮತ್ತೆ ಟೆನೆಂಟಿಗೆ ಬಿಡಿಸಿ ಕೊಡಬೇಕು ಎಂದು ಹೇಳಿದ್ದಾರೆ. ಇದು ಹೊಸ ವಿಷಯವಾಗುತ್ತದೆ 6 ವರ್ಷಗಳು ಇರಲಿ ಎಷ್ಟೇ ವರ್ಷ ಇರಲಿ ಒಂದು ಉದ್ದೇಶ ಸಾಫಲ್ಯ ಆಗ ಬೇಕು ಎಂದರೆ ಸೀಲಿಂಗಿನಿಂದ ಒಳಗೆ ಇದ್ದಂಥವರಿಗೆ ಏತಕ್ಕೆ ರಿಸ್ಟ್ರಿಕ್ಷನ್ ಮಾಡುತ್ತೀರಿ? ಅವರಿಗೆ ಎಗ್ಸೆಂಪ್ಷನ್ ಮಾಡಬೇಕು. ಅದು ಚರೋಇದೆ. ಈಗ ನೀವು ಏನು ಸೀಲಿಂಗ್ ಇಟ್ಟಿದ್ದೀರೊ ಆ ಸೀಲಿಂಗಿನೊಳಗೆ ಎಷ್ಟು ಭಾಗ ಇದೆಯೋ ಅದಕ್ಕೆ ಟೆನೆನ್ಸಿ ಎಗ್ಸೆಮ್ಷನ್ ಯಾಕೆ ಕೊಡಬಾರದು?

ಶ್ರೀ ಕಡಿದಾಳ್ ಮಂಜಪ್ಪ.—ನಿಮ್ಮ ಏರಿಯಾದಲ್ಲಿ ಈಗ ಕಾನೂನು ಏನಿದೆ?

ಶ್ರೀ ಬಿ. ಜಿ. ಖೋತ್.—ಸೀಲಿಂಗ್ ಒಳಗೆ ಎಕ್ಸೆಂಪ್ಷನ್ ಕೊಟ್ಟರೆ ಏನು ಅಡಚಣೆ ಇದೆ 1952ರ ಹಿಂದೆ 6 ವರ್ಷಗಳತನಕ ಪೊಜಿಷನ್ ತೆಗೆದು ಕೊಂಡಿದ್ದರೂ ಅದನ್ನು ರೆಸ್ಟೋರ್ ಮಾಡಿ ಕೊಡಬೇಕು ಎಂದು ಹೇಳುತ್ತೀರಿ. ಇದು ಹಳೆ ಮಾತನ್ನು ಪುನಃ ಎಬ್ಬಿಸಿ ನ್ಯಾಯವಾಡಿಸಿದಂತಾಗುತ್ತದೆ. ಅದರಿಂದ ಹೆಚ್ಚು ತ್ರಾಸು ಆಗುತ್ತದೆ, ಮತ್ತು ಹೆಚ್ಚು ಮಂದಿಗೆ ಅಸಂತೋಷವಾಗುತ್ತದೆ. ಇರುವ ರಿಲೇಷನ್ಸ್ ಕೆಟ್ಟು ಹೋಗುತ್ತದೆ. ಈ ಕ್ಲಾಜ್ ನಿರರ್ಥಕ ಇದೆ ಇದರಿಂದ ಲಿಟಿಗೇಷನ್ ಆಗಿ ಹೆಚ್ಚು ತ್ರಾಸುಆಗುತ್ತದೆ. ಆದ್ದರಿಂದ ಅದನ್ನು ಕಾನೂನು ದೆಶೆಯಿಂದ ವಿಚಾರ ಮಾಡಬೇಕು ಎಂದು ನಾನು ಸೂಚನೆ ಮಾಡುತ್ತೇನೆ.

ಮತ್ತೊಂದು ವಿಚಾರ ವೇನೆಂದರೆ, ಮಾಲೀಕತ್ವ ಎಷ್ಟಕ್ಕೆ ಕೊಡಬೇಕೋ ಅಷ್ಟಕ್ಕೆ ಕೊಟ್ಟನಂತರ ಉಳಿದ surplus ಎಂದರೆ, ಹೆಚ್ಚಿಗೆ ಭೂಮಿಯನ್ನು ಸರ್ಕಾರಕ್ಕೆ ತೆಗೆದು ಕೊಳ್ಳುವಂತೆ ಮಾಡಿದ್ದಾರೆ. ಇದರಲ್ಲಿ ಒಂದು ದೋಷವಿದೆ, ಸರ್ಕಾರದವರು ತಾವು ತೆಗೆದು ಕೊಳ್ಳುವ ಸರ್ಪ್ಲಸ್ ಜಮೀನಿಗೆ ತೆಗಿದುಕೊಳ್ಳುವ ಹಣ ಹೆಚ್ಚುಯಿದ್ದು ರೈತನಿಂದ ಮಾಲೀಕನಿಗೆ ಜಮೀನನ್ನು ಕೊಡುತ್ತಾರೋ ಅವರಿಂದ ಕೊಡಿಸುವ ಪರಿಹಾರ ಹಣ ಕಡಿಮೆಯಾಗಿದೆ. ಏಕೆ ಹೀಗೆ ವ್ಯತ್ಯಾಸ ಮಾಡಬೇಕು ?

ಶ್ರೀ ಕಡಿದಾಳ್ ಮಂಜಪ್ಪ.—ಯಾವ ಖಂಡದ ವಿಚಾರ ನೀವು ಹೇಳುತ್ತಿರುವುದು ?

ಶ್ರೀ ಬಿ. ಜಿ. ಖೋತ್.—47, 72 ಮತ್ತು 78 ನೆಯ ಖಂಡಗಳವಿಷಯ. 47ನೆಯ ಖಂಡದ ಪ್ರಕಾರ ಸರ್ಕಾರ ರೈತನಿಂದ ಕೊಡಿಸುವ ಪರಿಹಾರ ಹಣ ಕಡಿಮೆ ಮತ್ತು, 78ರ ಪ್ರಕಾರ ಸರ್ಕಾರ ಭೂಮಿಯನ್ನು ತೆಗೆದುಕೊಂಡದ್ದಕ್ಕೆ ತೆಗೆದುಕೊಳ್ಳುವ ಪರಿಹಾರ ಹಣ ಹೆಚ್ಚು ಅಂದರೆ ಅದನ್ನು ಇನ್ನೊಬ್ಬರಿಗೆ ಕೊಡುವಾಗ ತಾವು ತೆಗೆದುಕೊಳ್ಳುವ ಹಣ ಹೆಚ್ಚು. ರೈತನಿಂದ ಮಾಲೀಕರಿಗೆ ಕೊಡಿಸುವ ಪರಿಹಾರ ಕಡಮೆಯಾಗುತ್ತದೆ.

ಶ್ರೀ ಕಡಿದಾಳ್ ಮಂಜಪ್ಪ.—ಸರ್ಕಾರದಿಂದ ಮಾಲೀಕರಿಗೇನು ಪರಿಹಾರ ಕೊಡುತ್ತಾರೋ ಅದನ್ನು ರೈತನಿಂದ ವಸೂಲು ಮಾಡುತ್ತಾರೆ. ಹೆಚ್ಚಾಗಿ ಮಾಡುವುದಿಲ್ಲ.

ಶ್ರೀ ಬಿ. ಜಿ. ಖೋತ್.—78 ನೆಯ ಖಂಡದಲ್ಲಿ average net annual ವರಮಾನದ 10 ಪಟ್ಟು ಎಂದು ನಿಗದಿ ಮಾಡಿದೆ. ಆದರೆ 47 ರ ಪ್ರಕಾರ 15 times the value of one fourth or one fifth of the gross produce ಎಂದಿದೆ. ನೀವು ಕೊಡುವುದಕ್ಕೆ ನೀವು ತೆಗೆದುಕೊಳ್ಳುವುದನ್ನು ಹೋಲಿಸಿದರೆ ಒಂದೂವರೆಯಷ್ಟು ಹೆಚ್ಚಾಗುತ್ತದೆ.

ಶ್ರೀ ಕಡಿದಾಳ್ ಮಂಜಪ್ಪ.— 78 ರ ವಿಚಾರ ತಾವು ಹೇಳುತ್ತಿರುವುದು surplus land ಗೆ ಸಂಬಂಧಪಟ್ಟದ್ದು ಎಂದರೆ personal cultivation ಸೀಲಿಂಗ್‌ನಷ್ಟು ಕೊಟ್ಟು ಅದಕ್ಕಿಂತ ಜಾಸ್ತಿಯಿರುವುದು. ಇನ್ನೊಂದು non-resumable land ಗೆ ಅನ್ವಯಿಸುತ್ತದೆ.

ಶ್ರೀ ಬಿ. ಜಿ. ಖೋತ್.—ಈ ವ್ಯತ್ಯಾಸವೇಕೆ ?

ಶ್ರೀ ಕಡಿದಾಳ್ ಮಂಜಪ್ಪ.—ಏಕೆಂದರೆ, ಗೇಣಿದಾರರು ಸಾಗುವಳಿ ಮಾಡತಕ್ಕ ಭೂಮಿಯಲ್ಲಿ ಗೇಣಿದಾರರಿಗೆ ಹಕ್ಕಿದೆ, ಭೂಮಾಲಿಕನಿಗೂ ಹಕ್ಕಿದೆ. ಆದುದರಿಂದ ಕಡಮೆ ಪರಿಹಾರ ಕೊಡಬೇಕಾದುದು ನ್ಯಾಯವೆಂದು ಸರ್ಕಾರದ ಭಾವನೆ.

ಶ್ರೀ ಬಿ. ಜಿ. ಖೋತ್.—ಇಷ್ಟು ದಿವಸವೂ ಮಾಲೀಕತ್ವ ವಿತ್ತು. ಇನ್ನು ಮುಂದೆ ಮಾಲೀಕತ್ವದ ಹಿತ ಅವನಿಂದ ಹೋಗುತ್ತದೆ. ಆದುದರಿಂದ ಇನ್ನು ಮುಂದೆ ಯಾರಿಗೆ ಮಾಲೀಕತ್ವದ ಹಕ್ಕು ಬರುತ್ತದೆಯೋ ಅವನಿಂದ ನ್ಯಾಯವಾದಷ್ಟು ಪರಿಹಾರದ ಹಣವನ್ನು ಮಾಲೀಕತ್ವ ಕಳೆದುಕೊಳ್ಳುವವನಿಗೆ ಕೊಡಿಸಬೇಕು. ಸರ್ಕಾರ ಎಷ್ಟು ಹಣವನ್ನು ತೆಗೆದುಕೊಳ್ಳುತ್ತಾರೋ ಅಷ್ಟು ಹಣವನ್ನು ಇವನಿಗೂ ಕೊಡಿಸಬೇಕು.

ಶ್ರೀ ಕಡಿದಾಳ್ ಮಂಜಪ್ಪ.—ಇದರಲ್ಲಿ ಅನುಮಾನಕ್ಕೆ ಆಸ್ಪದವೇ ಇಲ್ಲವೆಂದು ಕಾಣುತ್ತದೆ. surplus land ಗೆ ಎಷ್ಟು ಪರಿಹಾರ ಕೊಡಬೇಕೆಂಬುದು 72 ಮತ್ತು 78 ರಲ್ಲಿ ನಮೂದಾಗಿದೆ. 72 ನೆಯ ಖಂಡವನ್ನು ನೋಡಿ. ಅದರಲ್ಲಿ--

Section 72 ರಲ್ಲಿ.

"The compensation payable in respect of any land taken over by the State Government under Sections 68, 70 and 71, shall be ten times the average net annual income....."

Section 78. (2). ರಲ್ಲಿ

"The purchase shall be the aggregate of such amount as the Tribunal may determine as being equal to ten times the average net annual income in respect of the land..."ಎಂದಿದೆ. ಅದಕ್ಕೂ ಇದಕ್ಕೂ ವ್ಯತ್ಯಾಸವಿಲ್ಲ.

Sri B. G. KHOT.— For continuous three years average gross yield multiplied by ten years average of the prices and half of it, if it is irrigated , and one third of it the gross produce if it is a dry land, that comes to nearly, according to my calculation, less than the provision made according to Clause 47.

Sri KADIDAL MANJAPPA.—47ನೆಯ ಖಂಡಕ್ಕೂ ಇದಕ್ಕೂ ಸಂಬಂಧವಿಲ್ಲ. Clause 78 applies only to the surplus land not to non-resumable land.

ಶ್ರೀ ಬಿ. ಜಿ. ಖೋತ್.—ನನ್ನ ಅಭಿಪ್ರಾಯವೇನೆಂದರೆ, surplus land ಗೆ ಸರ್ಕಾರ purchase price ತೆಗೆದುಕೊಳ್ಳುತ್ತಾರೆ. ಆದರೆ ಅದಕ್ಕಿಂತ ಕಡಮೆ ಬೆಲೆಯನ್ನು ಗೇಣಿದಾರನಿಂದ ಮಾಲೀಕತ್ವ ಕಳೆದುಕೊಳ್ಳುವವನಿಗೆ ಕೊಡಿಸುತ್ತಾರೆ. ಹೀಗೆ ವ್ಯತ್ಯಾಸ ಮಾಡಬಾರದು ಒಂದೇ ರೀತಿ ಇರಬೇಕು.

Sri KADIDAL MANJAPPA.—In the case of surplus land there is no question of the tenant being benefited or the Government being benefited, because there is no tenant at all. You must make a clear distinction between non-resumable land and surplus land. Surplus land is the land which is in excess of the ceiling area under the personal cultivation of the owner. Non-resumable land is the land which is going to be registered in the name of the tenant.

ಶ್ರೀ ಬಿ. ಜಿ. ಖೋತ್.- ಷೆಡ್ಯೂಲನಲ್ಲಿ ಬದಲಾವಣೆ ಮಾಡಬೇಕು. first class land 27 standard acres ಎಂದು ನಿಗದಿಯಾಗಿದೆ, ಆರನೆಯ ದರ್ಜೆ ಭೂಮಿಯಾದರೆ ಇದರ ಆರರಷ್ಟಾಗುತ್ತದೆ. 27 multiplied by six= 162 acres. Take for instance sixth class of land. Six acres are equal to one standard acre of first class land. That comes to 162 acres. ಭೂಮಿಯ quality ಗಣನೆಗೆ ತೆಗೆದು ಕೊಂಡಿಲ್ಲ.

You have taken it for granted that one standard acre is equal to six acres of 6th class land in land classification. the Quality of land is not taken into consideration. One standard acre of first class land is taken to be equivalent to one standard acre of inferior class of land...

ಶ್ರೀ ಕಡಿದಾಳ್ ಮಂಜಪ್ಪ.—ಒಂದನೆಯ ದರ್ಜೆ ಜಮೀನೆಂದರೆ, ಎರಡು ತರಿಫಸಲು ಬೆಳೆಯಲು ಸಾಕಷ್ಟು ಖಾಯಂ ನೀರಾವರಿ ಆಶ್ರಯವಿರಬೇಕು.

Sri B. G. KHOT.—Superior class yields more than the inferior class. Quality of the land is not into consideration when this is classified. ನೀರುಹಾಯಿಸುವ ಜಮೀನೆಲ್ಲ ತರಿ ಆದರೆ ಅಂಥ Superior inferior ಜಮೀನುಗಳು yield ನಲ್ಲಿ ಹೆಚ್ಚು ಕಡಮೆಯಾಗುತ್ತದೆ. ಆದ ಕಾರಣ quality of land ಗಣನೆಗೆ ತೆಗೆದುಕೊಳ್ಳಬೇಕು. Religious and charitable ಇತ್ಯಾದಿ institutions ಗೆ ವಿನಾಯಿತಿ ಕೊಡಬೇಕು. co-operative Act ನ ನಿಯಮಗಳನ್ನು ಇದಕ್ಕೆ ಅನ್ವಯಿಸಬಾರದು.

MR. SPEAKER.—The House will now rise and meet again after Half an hour.

The House adjourned for recess at Ten of the Clock and reassembled at Thirty Minutes past Ten of the Clock.

[MR. SPEAKER In the chair]

†ಶ್ರೀ ಆರ್. ಪಾಟೀಲ್ (ಸಿಗ್ಗಾಂವಿ).-ಅಧ್ಯಕ್ಷ ಮಹಾಶಯರೇ, ಕಂದಾಯ ಮಂತ್ರಿಗಳು ಇವತ್ತಿನ ದಿವಸ ಒಕ್ಕಲತನದ ಭೂಮಿಗಳ ಬಗ್ಗೆ ತಂದಿರುವ ಮಸೂದೆಯನ್ನು ಅನುಮೋದನೆ ಮಾಡುತ್ತಾ ಬೆಂಬಲ ಕೊಟ್ಟು ಮಾತನಾಡಲು ನಾನು ನಿಂತಿದ್ದೇನೆ. ಈ ಕಾನೂನು ಒಕ್ಕಲಿಗರ ಜೀವಾಳದ ಪ್ರಶ್ನೆಯಾಗಿದೆ. ಇದರಲ್ಲಿ ಮುಖ್ಯವಾಗಿ ಭೂಮಾಲೀಕರ ಮತ್ತು ರೈತನ ಸಂಬಂಧ ಹೇಗಿರಬೇಕು ಎಂಬುದು ಇದೆ. ಮಾನ್ಯ ಕಂದಾಯ ಮಂತ್ರಿಗಳು ಬಹಳ ಶ್ರಮವಹಿಸಿ ಆದಷ್ಟು ಯೋಗ್ಯವಾದ ರೀತಿಯಲ್ಲಿ ಈ ಕಾಯಿದೆ ಮಾಡಿದ್ದಾರೆ. ಇದರಲ್ಲಿಯ ಕೆಲವು ವಿಷಯಗಳನ್ನು ಸ್ವಲ್ಪ ಅದಲು ಬದಲು ಮಾಡಲು ನಾನು ಸೂಚನೆ ಮಾಡುತ್ತೇನೆ. ರೈತರು ಭೂಮಿಯನ್ನು ಹೆಚ್ಚು ಫಲವತ್ತಾಗಿ ಮಾಡಿ ಹೆಚ್ಚು ಆಹಾರ ಧಾನ್ಯ ಬೆಳೆಯಲಿಕ್ಕೆ ರೈತರಿಗೆ ಉತ್ತೇಜನ ಕೊಡುವುದೇ ಈ ಮಸೂದೆಯ ಉದ್ದೇಶವಾಗಿದೆ. ಅದರಂತೆ ಭೂಮಾಲೀಕರಿಗೆ ಯೋಗ್ಯ ಪರಿಹಾರ ಕೊಡಬೇಕೆಂಬ ಉದ್ದೇಶ ಸಹ ಇದೆ.

ಇದರಲ್ಲಿ ಮುಖ್ಯವಾಗಿ ಸಣ್ಣ ಹಿಡುವಳಿದಾರರ ಬಗ್ಗೆ ಒಂದು ಸೂಚನೆ ಮಾಡುತ್ತೇನೆ. ಸಣ್ಣ ಹಿಡುವಳಿದಾರರಿಗೆ 15 ಪಟ್ಟು ಕೊಡಬೇಕೆಂದು ಇರುವುದು ಬಹಳ ಕಡಿಮೆಯಾಗಿದೆ. ಆದುದರಿಂದ 15 ಪಟ್ಟು ಎಂದು ಇರುವದನ್ನು 20 ಪಟ್ಟು ಮಾಡಬೇಕೆಂದು ನಾನು ಸೂಚಿಸುತ್ತೇನೆ. ಇನ್ನು ಸಣ್ಣ ಹಿಡುವಳಿದಾರರು ಯಾರು ಎಂಬುದನ್ನು ನಿರ್ದಿಷ್ಟವಾಗಿ ಗೊತ್ತುಮಾಡುವದಕ್ಕೆ ನನ್ನ ಸೂಚನೆ ಏನೆಂದರೆ 10 ಸಾವಿರ ರೂಪಾಯಿಗಳಿಗಿಂತ ಕಡಿಮೆ ಬೆಲೆಯಾಗತಕ್ಕ ಭೂಮಿ ಇರುವವರು ಸಣ್ಣ ಹಿಡುವಳಿದಾರರು ಎಂದು ತಿಳಿದುಕೊಳ್ಳಬೇಕು. ಮತ್ತು ಈ ಸಣ್ಣ ಹಿಡುವಳಿದಾರರಿಗೆ ಒಟ್ಟು ಭೂಮಿಯ 20 ಪಟ್ಟು ಬೆಲೆ ಪರಿಹಾರವೆಂದು ಕೊಡಬೇಕು.

ಇನ್ನು ವಿನಾಯತಿ ಕೊಡುವ ಬಗ್ಗೆ ಒಂದು ಸೂಚನೆ ಮಾಡುತ್ತೇನೆ. ವಿಧವೆಯರಿಗೂ ಮತ್ತು ಲಗ್ನವಾಗದೇ ಇರತಕ್ಕ ಹೆಣ್ಣುಮಕ್ಕಳಿಗೂ ಈ ಸವಲತ್ತು ಕೊಡಲು ಏನೂ ಅಡ್ಡಿಯಿಲ್ಲ. ಇವರಿಗೆ ಈ ಸವಲತ್ತು ಕೊಡುವುದರಿಂದ ಏನೂ ಹಾನಿಯಾಗುವದಿಲ್ಲ. ಅವರಿಗೆ ವಿನಾಯಿತಿ ಕೊಟ್ಟರೆ ಜೀವಮಾನ ವಿರುವವರೆಗೆ ಉಪಭೋಗ ಮಾಡುತ್ತಾರೆ. ಆದುದರಿಂದ ಇವರಿಗೆ ವಿನಾಯಿತಿ ಕೊಟ್ಟರೆ ಭೂಮಿಯನ್ನು ಸಾಗುವಳಿ ಮಾಡುವ ರೈತರಿಗೂ ಅನುಕೂಲವಾತ್ತದೆ. ಹೆಣ್ಣು ಮಕ್ಕಳಿಗೂ ಅನುಕೂಲವಾಗುತ್ತದೆ. ಆದಕಾರಣ ಈ ಸವಲತ್ತನ್ನು ಅವರಿಗೆ ಕೊಡುವ ಬಗ್ಗೆ ಮಸೂದೆಯಲ್ಲಿ ಸೂಕ್ತ ತಿದ್ದುಪಡಿ ಮಾಡಬೇಕು.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಮಸೂದೆಯಲ್ಲಿಯ 47 ಕಲಮನ್ನು ಹೇಗೆ ತಿದ್ದುಪಡಿ ಮಾಡಬೇಕೆಂದು ಹೇಳುತ್ತೀರಿ ? ಯಾವರೀತಿ ಬದಲಾವಣೆ ಮಾಡಬೇಕು ತಿಳಿಸುತ್ತೀರಾ ?

ಶ್ರೀ ಆರ್. ಸಿ. ಪಾಟೀಲ್.—ನಾನು small holders ಬಗ್ಗೆ ಅಷ್ಟೇ ಹೇಳಿದೆ. 15 times ಎಂದಿರುವುದನ್ನು 20 times ಎಂದು ಮಾಡಬೇಕು ಎಂದು ಸೂಚಿಸಿದ್ದೇನೆ. ಇನ್ನು ಸಣ್ಣ ಹಿಡುವಳಿದಾರರು ಯಾರು ಎಂಬುದಕ್ಕೆ ಸಾಮಾನ್ಯವಾಗಿ ಭೂಮಿಯ ಬೆಲೆ ಹತ್ತು ಸಾವಿರ ರೂಪಾಯಿ ವರೆಗೆ ಇರುವವರೆಲ್ಲರೂ ಸಣ್ಣ ಹಿಡುವಳಿದಾರರು ಎಂದು ತಿಳಿಯಬೇಕು.

ಇನ್ನು ಲಗ್ನವಾಗದೇ ಇರತಕ್ಕ ಹೆಣ್ಣುಮಕ್ಕಳಿಗೆ exemption ಕೊಡಬೇಕೆಂದು ನಾನು ಸೂಚಿಸುತ್ತೇನೆ. ಇನ್ನು ಕೋ-ಅಪರೇಟಿವ್ ಫಾರ್ಮಿಂಗ್ ಮಾಡುವ ವಿಚಾರದಲ್ಲಿ ಐದು ಮೈಲ ರೇಡಿಯಸ್ ಒಳಗೆ ಇರತಕ್ಕಂಥಾದ್ದು ಬಹಳ ಅನುಕೂಲವಾಗುತ್ತದೆ ಎಂದು ನಾನು ಹೇಳುತ್ತೇನೆ. 5 ಮೈಲ Radius ಒಳಗೆ ಇರತಕ್ಕಂಥವರು ಸಹಕಾರಿ ಸಂಘಗಳನ್ನು ಮಾಡಿಕೊಳ್ಳಲು ಅಡ್ಡಿಯಿಲ್ಲವೆಂದು ನಾನು ಸೂಚನೆ ಮಾಡುತ್ತೇನೆ.

ಇನ್ನು ಮುಖ್ಯವಾಗಿ ಇರತಕ್ಕಂಥ ತತ್ವಅಂದರೆ ಲಾವಣಿವಿಷಯ. ಈ ಲಾವಣಿವಿಷಯದಬಗ್ಗೆ ನನ್ನದು ಭಿನ್ನಾಭಿಪ್ರಾಯವಿದೆ. ಲಾವಣಿ ಕೊಡುವ ವಿಷಯ fundamental rightsಗೆ ವ್ಯತಿ ಬರುತ್ತದೆಂದು ನಾನು ಹೇಳುತ್ತೇನೆ. ಲಾವಣಿ ಕೊಡುವುದನ್ನು ಬಂದು ಮಾಡಿದರೆ landless laboursಗಳಿಗೆ ತೊಂದರೆಯಾಗುತ್ತದೆ. ಭೂಮಿಯಲ್ಲಿ ಕೆಲಸ ಮಾಡುವ ಕೂಲಿಕಾರರಿಗೆ ಕೆಲಸ ಸಿಕ್ಕುವದಿಲ್ಲ. ಉದ್ಯೋಗ ದೊರೆಯುವದಿಲ್ಲ. ಅದರಿಂದ ಬಹಳ ತೊಂದರೆಯಾಗುತ್ತದೆ. ಆದುದರಿಂದ Two basic holdings ವರೆಗೆ ಲಾವಣಿಕೊಡಲಿಕ್ಕೆ ಬಿಟ್ಟರೆ ಕೂಲಿಕಾರರಿಗೆ ಸಣ್ಣ ಸಣ್ಣ ರೈತರಿಗೆ ಅನುಕೂಲವಾಗುತ್ತದೆ. ಹೆಚ್ಚಾಗಿ ಇರತಕ್ಕ ಭೂಮಿಯನ್ನು ಲಾವಣಿ ಕೊಡುವದಕ್ಕೆ ಬರುವ ಹಾಗೆ ಸೂಕ್ತ ಬದಲಾವಣೆ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು non-agricultural purposes ಸಲುವಾಗಿ protected tenants ನಿಂದ ಭೂಮಿಯನ್ನು ಬಿಡಿಸಿಕೊಳ್ಳುವುದು ಅನ್ಯಾಯವಾಗುತ್ತದೆ. non-agricultural purposes ಸಲುವಾಗಿ ಯಾವದೇ ಟೆನಂಟ್ ಇರಲಿ ಭೂಮಿಯನ್ನು ಬಿಡಿಸಬಾರದು. ಎಂದು ಹೇಳುತ್ತೇನೆ. ಈಗ ಸಭೆಯ ಮುಂದಿರುವ ಮಸೂದೆಯನ್ನು ಅನುಮೋದಿಸಿ, ಬಹಳ ಶ್ರಮವಹಿಸಿ ಈ ಮಸೂದೆಯನ್ನು ತಂದಿರುವ ಕಂದಾಯ ಮಂತ್ರಿಗಳನ್ನು ಅಭಿನಂದಿಸಿ ನನ್ನ ಭಾಷಣ ಮುಗಿಸುತ್ತೇನೆ.

ಶ್ರೀ ಜಿ. ಎನ್. ಪುಟ್ಟಣ್ಣ (ತುಮಕೂರು).—ಮಾನ್ಯ ಅಧ್ಯಕ್ಷರೆ, ಈಗ ನಮ್ಮ ಮುಂದೆ ಇರತಕ್ಕಂಥ ಈ ಮಸೂದೆಯ ಬಗ್ಗೆ ನಮ್ಮ ವಿರೋಧ ಪಕ್ಷದ ನಾಯಕರಾದ ಶ್ರೀ ಮಲ್ಲಾರಾಧ್ಯರವರು ಹೇಳಿದಂತೆ, ಕಳೆದ 20-25 ವರ್ಷಗಳಿಂದ ಕಾಂಗ್ರೆಸ್ಸಿನವರು ಹೇಳತಕ್ಕಂಥ "ಉಳುವವನೇ ಭೂಮಿಯ ಒಡೆಯ" ಎಂಬ ತತ್ವವನ್ನು ಕಾರ್ಯಗತ ಮಾಡಲು ಹೊರಟಿದ್ದಾರೆ. ಕಳೆದ 14 ವರ್ಷಗಳಿಂದ ಇದನ್ನು ಏಕೆ ಕಾರ್ಯಗತ ಮಾಡಲಿಲ್ಲ ಎಂಬುದನ್ನು ಹೇಳಲಿಲ್ಲ. ಏನೇ ಇರಲಿ ರೆವಿನ್ಯೂ ಮಂತ್ರಿಗಳ ಬಗ್ಗೆ ನಾನು ದುರುದ್ದೇಶ ಆರೋಪಣೆ ಮಾಡುವದಿಲ್ಲ. ಆದರೆ ಈಗ ಜನರಲ್ ಎಲೆಕ್ಷನ್ ಹತ್ತಿರ ಬಂದಿದೆ. "ಉಳುವವನೇ ಭೂಮಿಯ ಒಡೆಯ" ಎಂದು ಇಲ್ಲಿಯವರೆಗೆ ಹೇಳುತ್ತ ಬಂದಿರುವುದನ್ನು ಈಗ ಕಾರ್ಯಗತ ಮಾಡದೇ ಇದ್ದರೆ ಬರುವ ಜನರಲ್ ಎಲೆಕ್ಷನ್‌ನಲ್ಲಿ ಹಳ್ಳಿಗಳಿಗೆ ಹೋಗಿ ಜನರ ಓಟು ಕೇಳುವುದು ಕಷ್ಟವಾಗುತ್ತದೆ ಎಂದು ಕಾಣುತ್ತದೆ. ಆದ್ದರಿಂದ ಈ ಮಸೂದೆ ಈಗ ಬಂದಿದೆ. ಆದರೆ ಬರುವ ಜನರಲ್ ಎಲೆಕ್ಷನ್ ಒಳಗಾಗಿ ಈ ಕಾನೂನು ಜಾರಿಗೆ ತರುವುದು ಸಾಧ್ಯವಿಲ್ಲವೆಂದು ನನಗೆ ಅನ್ನಿಸುತ್ತದೆ. ಕಾಂಗ್ರೆಸ್ ರಾಜ್ಯ ಬಂದು 14 ವರ್ಷ ಕಾಲದಲ್ಲಿ ತರದೇ ಇದ್ದು ಈಗ ತಂದಿರುವುದನ್ನು ನೋಡಿದರೆ ಜನರಲ್ ಎಲೆಕ್ಷನ್ ಕಾರಣ ಎಂದು ಅನಿಸುತ್ತದೆ. ಏನೇ ಇರಲಿ ನಿಶ್ಚಿತವಾಗಿ ಯಾವಾಗ ಜಾರಿಗೆ ತರುತ್ತಾರೆ ಎಂಬುದನ್ನು ಹೇಳಬೇಕು. ದೇಶದಲ್ಲಿ ಎಷ್ಟು ಜಮೀನು ಸಾಗುವಳಿಗೆ ಯೋಗ್ಯವಿದೆ ಎಷ್ಟು ಜಮೀನು ಇನ್ನು ಸಾಗುವಳಿಗೆ ಕೊಡಬಹುದು ಎಂಬ ವಿವರ ಕರಾರುವಾಕ್ಕಾಗಿ ಎಲ್ಲಿಯೂ ಸಿಕ್ಕುವುದಿಲ್ಲ. ಯಾವ ತಾಲ್ಲೂಕು ತೆಗೆದುಕೊಂಡರೂ ಈ ವಿವರ ದೊರೆಯುವದಿಲ್ಲ. ದೇಶದಲ್ಲಿ ಭೂಮಿ ಎಷ್ಟೆಷ್ಟು ಇದೆ. ಯಾವಯಾವುದು ಎಷ್ಟು ಇವೆ, ಅಮೃತಮಹಾಲ್ ಕಾವಲು ಎಷ್ಟು ಈಚಲ ಭೂಮಿ ಎಷ್ಟು, ಫಾರೆಸ್ಟ್‌ಲ್ಯಾಂಡ್ ಎಷ್ಟು ಎಂಬ ಲೆಕ್ಕಾಚಾರ ಗೊತ್ತಾಗುವದಿಲ್ಲ.

ಎಲ್ಲಿ ಹುಡುಕಿದರೂ ಆ ವಿಚಾರವಿಲ್ಲ. ಯಾವ ಲೆಕ್ಕ ಪತ್ರಗಳನ್ನು ನೋಡಿದರೂ ಸಿಕ್ಕುವುದಿಲ್ಲ. ತಾಲ್ಲೂಕು ಆಫೀಸುಗಳಲ್ಲಿ Lands available for cultivation ಎಂದು ಕೆಲವು Statements ತಯಾರುಮಾಡಿದ್ದಾರೆ. ಆ ಜಮೀನನ್ನೆಲ್ಲ ರಾಜಕೀಯ ಸಂತ್ರಸ್ತರಿಗೆ ಕೊಟ್ಟಿದ್ದಾರೆ. ಬೇರೆಯವರಿಗೆ ಯಾರಿಗೂ ಕೊಟ್ಟಿಲ್ಲ. ಇದನ್ನೆಲ್ಲ Consolidate ಮಾಡಿ ಯಾರು ಯಾರು ಜಮೀನು ಮಾಡುವುದಕ್ಕೆ ಬರುತ್ತೀರಿ ಎಂದು ಕೇಳಿದರೆ ಚೆನ್ನಾಗಿತ್ತು. ಈಗ ಹಳ್ಳಿಗಳಲ್ಲಿರುವವರಿಗೆ ಸುಖ ಜೀವನಬೇಕು. ಅವರೆಲ್ಲ ಪಟ್ಟಣಗಳಿಗೆ ಹೋಗಿ ಬನ್ನಿಮಿಲ್ಲಿಗೆ ಅಥವಾ ಬೇರೆಯಾವುದಾದರೂ ಕಾರ್ಖಾನೆಗೆ ಸೇರಬೇಕು. ಯಾವುದೂ ದೊರೆಯದೆ ಇದ್ದರೆ ರೈಲ್ವೆ ಸ್ಟೇಷನ್ನಿನಲ್ಲಿ ಮೂಟೆ ಹೊತ್ತಾದರೂ ಇರೋಣವೆಂದು ಪಟ್ಟಣಗಳನ್ನು ಸೇರುತ್ತಿದ್ದಾರೆ. ಭೂಮಿಯನ್ನು ಕಷ್ಟಪಟ್ಟು ಬೆಳೆದು ತಾನೂ ತಿಂದು ಇತರರಿಗೂ ಆಹಾರವನ್ನು ಹಾಕೋಣವೆನ್ನುವ ಭಾವನೆ ಹೋಗಿದೆ. ಹಳ್ಳಿಯವರಿಗೆ ವಿದ್ಯುಚ್ಛಕ್ತಿಬೇಕು. ಸಿನಿಮಾಬೇಕು, ಕಾಫಿಕ್ಲಬ್‌ಗಳುಬೇಕು. ಈ ಅನುಕೂಲಗಳೆಲ್ಲಾ ಪಟ್ಟಣಗಳಲ್ಲಿ ಮಾತ್ರ ಸಿಕ್ಕುತ್ತವೆ. ಹಳ್ಳಿಯ ಜೀವನಕ್ಕಿಂತ ಪಟ್ಟಣವಾಸವೇ ಒಳ್ಳೆಯದು ಎಂದು ಭಾವಿಸುತ್ತಾರೆ. ಪಟ್ಟಣದಲ್ಲಿ ತಿನ್ನಲು ಏನೂ ದೊರೆಯದೆ ಇದ್ದರೆ ಎರಡು ಇಡ್ಲಿ ತಿಂದು ಫುಟ್‌ಪಾತ್ ಮೇಲೆ ಮಲಗಿದರೂ ಅದು ಅವರಿಗೆ ಸುಖವಾಗಿರುತ್ತದೆ. ಹಳ್ಳಿಗಳಲ್ಲಿ ಅರಳೀ ಕಟ್ಟೆಯ ಮೇಲೆ ಕುಳಿತುಕೊಂಡು ಬೀಡಿ ಸೇದುತ್ತ ಕಾಲ ಕಳೆಯುತ್ತಾರೆ. ದಿನಕ್ಕೆ ಎರಡು ರೂಪಾಯಿ ಕೂಲಿ ಕೊಡುತ್ತೇವೆ ಎಂದರೂ ಕೆಲಸಕ್ಕೆ ಬರುವುದಿಲ್ಲ. ನಾನೂ ಈ ಹಿಂದೆಯೇ ಅನೇಕ ಸಲ ಹೇಳಿರುವಂತೆ ಒಟ್ಟು ಎಷ್ಟು ಜಮೀನು ಹಂಚಲು ಸಿಕ್ಕುತ್ತದೆ ಎಂದು ಲೆಕ್ಕ ತೆಗೆದುಕೊಂಡು, ಆ ಜಮೀನನ್ನು ಮಾಡಲು ಯಾರು ಬರುತ್ತಾರೆಂದು ತಿಳಿದು ಕೊಂಡು ಒಂದು ಕಾಲೋನಿಮಾಡಿ ಅವರಿಗೆಲ್ಲ ಜಮೀನನ್ನು ಕೊಟ್ಟು ಉಳಿದುದನ್ನು ಬೇರೆಯವರಿಗೆ ಕೊಟ್ಟಿದ್ದರೆ ಚೆನ್ನಾಗಿತ್ತು. ಅದನ್ನು ಮಾಡದೆ ready made land ನ್ನು resume ಮಾಡಿ ರೈತರಿಗೆ ಕೊಡುತ್ತೀರಿ. ಹೀಗೆ ಕೊಡುವಾಗ ಜಮೀನನ್ನು ಎಲ್ಲಿ ಕೊಡುತ್ತೀರಿ ? ನಮ್ಮ ದೇಶದಲ್ಲಿ ಜಮೀನ್ದಾರರು ಬಹಳ ಕಡಮೆ ಜನರಿದ್ದಾರೆ. ನಮ್ಮಲ್ಲಿರುವವರು big holders and small holders ಎಂದು ಹೇಳಬಹುದು.

ಇವರ ಜಮೀನು ನಾಲ್ಕಾರು ಕಡೆ ಇರುತ್ತದೆ. ಇವರಿಂದ ಜಮೀನು ವಶಪಡಿಸಿಕೊಳ್ಳುವಾಗ ಯಾವುದನ್ನು ತೆಗೆದು ಕೊಳ್ಳುತ್ತೀರಿ ? ಜಮೀನ್ದಾರ ಬಿಟ್ಟಿದ್ದನ್ನು ತೆಗದುಕೊಳ್ಳುತ್ತಿರಾ ? ರೈತನಾದವನು ಒಪ್ಪಿದ್ದನ್ನು ತೆಗೆದುಕೊಳ್ಳುತ್ತೀರಾ ಅಥವಾ ಟ್ರಿಬ್ಯುನಲ್ ಬಿಡಿಸಿದನ್ನು ತೆಗೆದು ಕೊಳ್ಳುತ್ತಿರಾ ? ಇದನ್ನು ಸರಿಯಾಗಿ ವಿಶಪಡಿಸಿಲ್ಲ. ಸೆಲೆಕ್ಟ್ ಕಮಿಟಿಯ ವರದಿಯಲ್ಲಿಯೂ ಇಲ್ಲ, ಬಿಲ್ಲಿನಲ್ಲಿಯೂ ಇಲ್ಲ. ಒಬ್ಬನಿಗೆ ಹೆಚ್ಚು ಭೂಮಿ ಇರುತ್ತದೆ ಅದರಲ್ಲಿ ತೋಟ, ಗದ್ದೆ ಎಲ್ಲ ಸೇರಿರುತ್ತದೆ.ಇದರಲ್ಲಿ ರೈತನು ಉತ್ತಮವಾಗಿರುವ ತೆಂಗಿನ ತೋಟದ ಮಧ್ಯೆ ಇರುವ ಜಮೀನು ಬೇಕೆಂದರೆ ಅದನ್ನು ಬಿಡಿಸಕೊಳ್ಳುತ್ತಿರಾ ? ಅಥವಾ ಜಮೀನ್ದಾರನು ತನಗೆ ಬೇಡವಾದ ಇನ್ನೂ 10–12 ವರ್ಷಕ್ಕೆ ಫಸಲು ಬರುವಂಥ ತೆಂಗಿನ ತೋಟವನ್ನು ಬಿಟ್ಟರೆ ತೆಗೆದುಕೊಳ್ಳುತ್ತಿರಾ ? ಇದೊಂದನ್ನು ವಿಶದಪಡಿಸಿಲ್ಲ. ಯಾರಾದರೂ ಅಧಿಕಾರಿಗಳಿಗೆ ಈ ಅಧಿಕಾರವನ್ನು ಕೊಟ್ಟರೆ ವಶೀಲಿ ಬಾಜಿ ನಡೆಯುವುದಕ್ಕೆ ಅವಕಾಶವಿದೆ. ಯಾರಾದರೂ ಕಾಂಗ್ರೆಸ್ ಮಹನೀಯರು ಪ್ರಭಾವವನ್ನು ಬೀರಿದರೆ ಅವರು ಹೇಳಿದಂತೆ ಆಗುವುದಕ್ಕೆ ಆಸ್ಪದವಿದೆ. ಇದು Complicated ವಿಚಾರ "ಕುರಿ ಕಾಯುತ್ತಿಯಾ ತೋಳ ಎಂದರೆ ಸಂಬಳವಿಲ್ಲದೆ ಕಾಯುತ್ತೇನೆ" ಎನ್ನುವಂತಾಗುತ್ತದೆ ಈ ವಿಚಾರದಲ್ಲಿ ದೂರಾಲೋಚನೆ ಮಾಡಬೇಕು.

ಜಮೀನಿಲ್ಲದೆ ಇರುವವನಿಗೆ insufficient holder ಗೆ ಜಮೀನನ್ನು ಕೊಡಬೇಕಾದರೆ, ಅಲ್ಲೊಂದು ಕಡೆ ಇಲ್ಲೊಂದು ಕಡೆ ಸಣ್ಣ ಸಣ್ಣ ತುಂಡುಗಳಾಗಿ ಜಮೀನು ದೊರೆತರೆ ಅದರಿಂದ ತೊಂದರೆಯಾಗುತ್ತದೆ. ಒಂದು ವೇಳೆ ಅವನಿಗೆ ಜಮೀನನ್ನು ಕೊಟ್ಟರೂ, ಮೂಲಹಿಡುವಳಿ ಅಥವಾ ಕುಟುಂಬ ಹಿಡುವಳಿಯಷ್ಟು ಕೊಡಬಹುದು. ಈ ರೈತನಿಗೆ ಜಮೀನ್ದಾರ ಸಾಲ ಕೊಡಬೇಕಾದರೆ ಅವನಿಗೆ ಸೆಕ್ಯೂರಿಟಿ ಇರಬೇಕು ಎತ್ತುಗಳು ನೇಗಿಲು ಮುಂತಾದ ವ್ಯವಸಾಯೋಪಕರಣಗಳಿಗೆ ಒಂದು ಸಾವಿರ, ಒಂದೂವರೆ ಸಾವಿರ ರೂಪಾಯಿ ಬೇಕಾಗುತ್ತದೆ. ಇವಿಲ್ಲದೆ ಇದ್ದರೆ ಜಮೀನು ಪಾಳುಬಿದ್ದು ಉತ್ಪತ್ತಿ ಕಡಮೆಯಾಗುತ್ತದೆ. ಇದಕ್ಕೆ ಏನು ಪ್ರಾವಿಷನ್ ಮಾಡಿದ್ದೀರಿ ? ಶ್ಯಾನುಭೋಗರು ಪಹಣಿ ಬದಲಾಯಿಸಿ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿದ್ದಾರೆ. Selection of land by the Tribunal ಎಂದು ಮಾಡದೆ ಇದ್ದರೆ ಒಬ್ಬರ ತಲೆ ಇನ್ನೊಬರ ಕೈಯಲ್ಲಿ ಬೀಳುವ ಸಂದರ್ಭಬರುತ್ತದೆ, ಒಂದು ತೆಂಗಿನ ತೋಟವಿದ್ದು Compact area ಆಗಿದ್ದರೆ ಅದನ್ನು ಜಮೀನ್ದಾರನಿಗೆ ಬಿಟ್ಟು excess ಬರುವುದನ್ನು ಅವನು ಬೇಡವೆನ್ನುವುದನ್ನು ಇತರರಿಗೆ ಕೊಡಿ. ಯಾವನೋ ಪಡೆದು ಕೊಂಡಿದ್ದು, ಅದನ್ನು ಸಾವಿರಾರು ರೂಪಾಯಿಗಳ ಖರ್ಚಿನಿಂದ ಅಭಿವೃದ್ಧಿಮಾಡಿ, ಮನೆ ಮಂದಿಮಕ್ಕಳೆಲ್ಲ ಕಷ್ಟಪಟ್ಟು ವ್ಯವಸಾಯ ಮಾಡಿರುವಂತ ಜಮೀನನ್ನು ಮನೆ ಮಕ್ಕಳೆಲ್ಲ ಕಷ್ಟಪಟ್ಟು ಸಂಪಾದನೆಮಾಡಿರುವ ಸ್ವತ್ತನ್ನು ಅವರಿಂದ ಕಿತ್ತುಕೊಂಡು ಬೇರೆ ಯಾರಿಗೋ ಕೊಟ್ಟರೆ, ಇವನು ಮಾಡುವ ಹಾಗಿಲ್ಲ, ಅವನು ಮಾಡುವುದಿಲ್ಲ. ಹೀಗಾಗುತ್ತದೆ. ಹೀಗೆಂದ ಮಾತ್ರಕ್ಕೆ ಭೂಸುಧಾರಣೆ ಬೇಡವೆಂದು ಹೇಳುವುದಿಲ್ಲ. ಆದರೆ ವ್ಯಾಜ್ಯಗಳಿಗೆ, ಗಲಾಟೆಗಳಿಗೆ ಅವಕಾಶ ವಿರಬಾರದು. ಈಗ ಹಳ್ಳಿಗಳಲ್ಲಿ ಪಂಚಾಯಿತಿ ಕಾನೂನು ಬಂದಲಾಗಾಯ್ತು ದ್ವೇಷಾಸೂಯೆಗಳು ಹೆಚ್ಚಿ ಹಳ್ಳಿಗಳು ಹಾಳಾಗುತ್ತಿವೆ.

ಸೆಲೆಕ್ಟ್ ಕಮಿಟಿಯ 46 ಜನ ಸದಸ್ಯರು 64 ದಿವಸ ಸಭೆ ಸೇರಿ ಈ ವರದಿಯನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಇದರ ಮೇಲೆ ಪ್ಲಾನಿಂಗ್ ಕಮಿಷನ್ನಿನ ಅಭಿಪ್ರಾಯಗಳನ್ನು ಪಡೆದಿದ್ದಾರೆ. ಏಕೆ ಎನ್ನುವುದು ನನಗಂತೂ ಅರ್ಥವಾಗುವುದಿಲ್ಲ ಆಂಧ್ರದಲ್ಲಿ ತರಿಸಿಕೊಂಡರು, ಮದ್ರಾಸಿನಲ್ಲಿಯೂ ತರಿಸಿಕೊಂಡರು. ಅವರು ಕೊಟ್ಟ ಸಲಹೆಗಳನ್ನು ಮಾತ್ರ ಒಪ್ಪಿಕೊಳ್ಳಲಿಲ್ಲ. ಇಲ್ಲಿಂದ ರೆವಿನ್ಯೂ ಮಂತ್ರಿಗಳು, ಸೆಕ್ರೆಟರಿಯವರ ಸಂಗಡ ಡೆಲ್ಲಿಗೆ ಹೋಗಿ ಅಲ್ಲಿಂದ instructions ತಂದಿದ್ದಾರೆ. ಪ್ಲಾನಿಂಗ್ ಕಮಿಷನ್‌ನವರು ಈ ರೀತಿ ಮಾಡುವುದಕ್ಕೆ ಬದಲು ಕೋ-ಆಪರೇಟಿವ್ ಸೊಸೈಟಿಗಳ ಸಂಬಂಧದಲ್ಲಿ ಮಾಡಿದಂತೆ model Bill ಅನ್ನು ತಯಾರಿಸಿ ದೇಶಾದ್ಯಂತ ಕಳಿಸಿ ಆ ಪ್ರಕಾರ ನೀವೂ ಬಿಲ್ ತಯಾರುಮಾಡಿ ಎಂದು ತಿಳಿಸಿದ್ದರೆ ಚೆನ್ನಾಗಿತ್ತು, ನಮ್ಮ ಸಭೆಯಲ್ಲಿ ಚರ್ಚೆಯಾಗಿ

(ಶ್ರೀ ಜಿ. ಎಚ್. ಪುಟ್ಟಣ್ಣ)

ಸೆಲೆಕ್ಟ್ ಕಮಿಟಿಯಲ್ಲಿ ಮಾಡಿದುದನ್ನು ಇವರು ಬದಲಾವಣೆ ಮಾಡಬೇಕು ಎಂದರೆ ದೇಶಕ್ಕೆ ಅವಮಾನ ಮಾಡಿದಂತಾಗುತ್ತದೆಂದು ಹೇಳುತ್ತೇನೆ

Sri KADIDAL MANJAPPA.—The Planning Commission is a body entrusted with the task of planning for the entire country.

Sri J. B. MALLARADHYA.—But the point raised is that it was open to the Planning Commission to set up a uniform pattern having regard to local variations. Just as in the case of the co-operative Societies Bill they sent a model Bill they could have thought of a uniform Bill with such local variations as may be found necessary. What is the fun of allowing one set of conditions for Andhara, another set of conditions for Madras and a third set of conditions for Mysore ? Why did they not suggest all this at theearlier setage ?

Sri KADIDAL MANJAPPA.—They have suggested a scheme of land reforms applicable to all the States subject to local variations. Land reforms is a State subject.

Sri J. B. MALLARADHYA.—Were not their recommendations on the first plan and second plan available to the Joint Committee and did they not consider them ? You have met 64 times and set up a record for any select committee even in the matter of spending money. I want to know why the select committee did not take into consideration the definite recommendation made by the Planning Commission from the beginning.

†ಶ್ರೀ ಎಂ. ರಾಮಪ್ಪ.—ಪ್ಲಾನಿಂಗ್ ಕಮಿಷನ್ ವಿಷಯದಲ್ಲಿ ನಮಗೆ ಗೌರವವಿದೆ ಎಂದರೆ ತಪ್ಪಾಗಲಾರದು. ಅವರಿಗೆ Progressive views ಇದೆ. ಅವರ ಅಭಿಪ್ರಾಯಗಳಿಗೂ ಮನ್ನಣೆ ಇದೆ. ಅವರು ಮುಂಚೆಯೇ ಡ್ರಾಫ್ಟ್ ಬಿಲ್ ತಯಾರಿಸಿ ನಮಗೆ ಕಳಿಸಬಹುದಾಗಿತ್ತು. ಆದರಂತೆ ಸೆಲೆಕ್ಟ್ ಕಮಿಟಿಯವರು ಮತ್ತು ಸಭೆಯ ಸದಸ್ಯರೂ ಅನುಸರಿಸಬಹುದಾಗಿತ್ತು. ಈಗ ಸೆಲೆಕ್ಟ್ ಕಮಿಟಿಯ ರಿಪೋರ್ಟ್ ತೆಗೆದುಕೊಂಡು ಅವರಲ್ಲಿಗೆ ಏಕೆ ಹೋಗಬೇಕಾಗಿತ್ತು. ಇದರಿಂದ ಈ ಸಭೆಯ ಮತ್ತು ಸೆಲೆಕ್ಟ್ ಕಮಿಟಿಯ ಸದಸ್ಯರ ಗೌರವಕ್ಕೆ ಚ್ಯುತಿಯಾಗಿದೆ ಎಂದು ಶ್ರೀ ಪುಟ್ಟಣ್ಣನವರು ಹೇಳುತ್ತಿದ್ದಾರೆ.

Sri KADIDAL MANJAPPA.—The recommendations of the Planning Commission are binding on all States including Mysore State.

Sri V. SRINIVASA SHETTY.—Also Madras?

Sri KADIDAL MANJAPPA.—Also Madras.

Sri J. B. MALLARADHYA.—In this context an objection was raised on the floor of the Lok Sabha that the National Development Council has not got statutory existence. I know that the Planning Commission is there and its opinion is entitled to the highest regard in the nature of diretive to all the States.

11-00 A. M.

ಶ್ರೀ ಟಿ. ಎನ್. ಪುಟ್ಟಣ್ಣ.—ಸ್ವಾಮಿ, ನನ್ನ ಹತ್ತು ನಿಮಿಷ ತೆಗೆದುಕೊಂಡಿದ್ದಾರೆ.

ಹಿಂದೆ ಪ್ಲಾನಿಂಗ್ ಕಮಿಶನ್ನಿನವರು ಒಂದು ಮಾಡಲ್ ಕೋ ಆಪರೇಶನ್ ಬಿಲ್ ಕೊಟ್ಟಿದ್ದ ಹಾಗೆ, ಒಂದು ಮಾಡಲ್ ಲ್ಯಾಂಡ್ ರಿಫಾರಂಸ್ ಬಿಲ್ ಕೊಟ್ಟಿದ್ದರ ಅಡ್ಡಿ ಬರಲಿಲ್ಲ. ಅದು ಬಿಟ್ಟು ಎರಡೂವರೆ ಕೋಟಿ ಪ್ರಜಾಸಂಖ್ಯೆ ಎಲೆಕ್ಟ್ ಮಾಡಿದಂಥ ಈ ಅಸೆಂಬ್ಲಿಯ ಪ್ರೆಸೀಡಿಂಗ್ಸನ್ನೂ, 44 ಜನ ಸದಸ್ಯರನ್ನೊಳಗೊಂಡ ಸೆಲೆಕ್ಟ್ ಕಮಿಟಿಯ ಪ್ರಿಂಟೆಡ್ ವರದಿಯನ್ನು ತರಿಸಿಕೊಂಡು ಪ್ಲಾನಿಂಗ್ ಕಮಿಶನ್ನಿನವರು ಈ ರೀತಿ ಮಾಡಿದ್ದಾರೆಂದು ಹೇಳಿದರೆ, ಅದು ಅಡ್ವೈಸ್ ಆಗುವುದಿಲ್ಲ! ಡಿಕ್ಟೇಟರ್‌ಶಿಪ್ ಆಗುತ್ತದೆ. ಅದನ್ನು ಜಾರಿಗೆ ತಂದರೆ ನಾನೇ ಗವರ್ನ್‌ಮೆಂಟಿಗೆ ಮೊದಲು ಬರೆದು ಕ್ರಾಂತಿ ಹುಟ್ಟಿಸುತ್ತೇನೆ. ಆ ತರಹ ಮಾಡಿದರೆ ಇಡೀ ರಾಜ್ಯಕ್ಕೆ ಅವಮಾನವಾಗುತ್ತದೆ. ಈ ಬಿಲ್ಲು ಪಾಸಾದಮೇಲೆ, ಕೇರಳದ ಬಿಲ್ಲು ಮಾಡಿದ ಹಾಗೆ, ಪ್ರೆಸಿಡೆಂಟಿಗೆ ರೆಫರಾಗಿ ಬೇಕಾದರೆ ಅವರಿಂದ ವಾಪಸು ಬರಬಹುದಾಗಿತ್ತು. ಆಂಧ್ರದಲ್ಲಿ ಒಂದು ಸೀಲಿಂಗ್, ಮಧ್ಯ ಪ್ರದೇಶದಲ್ಲಿ ಇನ್ನೊಂದು ಸೀಲಿಂಗ್, ಹೀಗೆ 50-20-10 ಎಕರೆ ವಿಧ ವಿಧವಾಗಿ ಮಾಡಿರುವುದರಲ್ಲಿ ಏನಾದರೂ ಒಂದು ತತ್ವವಿದೆಯೇ? ಇದರಲ್ಲಿ ಏನೂ ಒಂದು ಧರ್ಮ, ನ್ಯಾಯ, ನೀತಿ ಇದೆ. ಒಂದು ಪ್ಲಾನಿಂಗ್ ಕಮಿಶನ್ ಕೇಳಿಕೊಂಡು ಮಾಡುವುದರಲ್ಲಿ ದೇಶಕ್ಕೆ ಒಂದು ದೊಡ್ಡ ಅವಮಾನ. ಇದರಿಂದ ದೇಶಕ್ಕೆ ನಮ್ಮ ಸರ್ಕಾರಕ್ಕೆ ಬೆಲೆ ಇಲ್ಲದೆ ಹೋದರೆ ಹೇಗೆ ಒಪ್ಪಿಕೊಂಡಿರಿ ಬೇಕಾದರೆ, ಪ್ರೆಸಿಡೆಂಟರು ಅವರಿಗೆ ಹೋದಮೇಲೆ ವಾಪಸು ಕಳುಹಿಸಲಿ; ಆವಾಗ ಹತ್ತು ಎಕರೆ ಅಲ್ಲದಿದ್ದರೆ, ಒಂದು ಎಕರೆ ಮಾಡಲಿಕ್ಕೆ ಅಡ್ಡಿ ಇಲ್ಲ, ಬೇಡವೆಂದು ಹೇಳುವುದಿಲ್ಲ.

ಬಡ ರೈತರಲ್ಲಿ ಒಗ್ಗಟ್ಟಿಲ್ಲ; ಬಿಲ್ಲು ತಂದಿದ್ದೀರ. ಪ್ರೈವೇಟ್ ಸೆಕ್ಟಾರಿನಲ್ಲಿ ಒಬ್ಬೊಬ್ಬರಿಗೆ ಒಂದೊಂದು ವರ್ಷಕ್ಕೆ 30-40 ಸಾವಿರ ರೂಪಾಯಿ ಟರ್ನ್ ಓವರ್ ಇದ್ದು, ಲಕ್ಷಾಂತರ ರೂಪಾಯಿ ಸಂಪಾದಿಸಿ ಬ್ಯಾಂಕಿನಲ್ಲಿ ಇಟ್ಟುಕೊಂಡಿರುತ್ತಾರೆ. ತಿಂಗಳಿಗೆ ಸಾವಿರ ಎರಡು ಸಾವಿರ ಬಾಡಿಗೆಯಿಂದ ಸಂಪಾದಿಸುವವರಿದ್ದಾರೆ. ಪ್ರೈವೇಟ್ ಸೆಕ್ಟಾರಿನಲ್ಲಿ ಇಷ್ಟು ಹೆಚ್ಚು ಸಂಪಾದನೆ ಇರುವವರ ಮೇಲೆಯೂ ಇದೇ ರೀತಿ ಸೀಲಿಂಗ್ ತರದೆ ಇರುವುದಕ್ಕೆ ಕಾರಣವೇನು? ಪ್ರೈವೇಟ್ ಸೆಕ್ಟಾರಿನಲ್ಲಿಯೂ ಇದೇ ರೀತಿ ಇನ್‌ಕಂ ನಿಗದಿ ಮಾಡುತ್ತೇವೆಂದು ಸರ್ಕಾರದವರು ಆಶ್ವಾಸನೆ ಕೊಡುತ್ತೀರ! ಪ್ರೈವೇಟ್ ಸೆಕ್ಟಾರಿನವರ ಮೇಲೂ ಬರತಕ್ಕಂಥ ಉತ್ಪತ್ತಿಯ ಮೇಲೆ ಸೀಲಿಂಗ್ ಹಾಕಬೇಕು. ನೀವು ಕೋಲಾರ ಡಿಸ್ಟ್ರಿಕ್ಟಿಗೆ ಹೋಗಿದ್ದಿರಿ. ಅಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆಗೆ 50 ಮೈಲಿ ಹೋದರೂ ಬೆಳೆಯೇ ಇಲ್ಲ. ಮೂರು ವರ್ಷ ಅಲ್ಲಿ ಬೆಳೆ ಆಗುವುದಿಲ್ಲ. ಒಂದು ಎಕರೆ ಇರುವವನ ಗತಿ ಏನು! ಅವನು ಬೆಂಗಳೂರಿಗೆ ಬಂದು ಕೂಲಿ ಮಾಡಲಿಕ್ಕೆ ಸಾಧ್ಯವೇ? ಬೆಳೆ ಹೋದರೆ ರೈತರು ಜಮೀನುದಾರರು ಎಲ್ಲಾ ನಾಶವಾಗಿ ಹೋಗುತ್ತಾರೆ; ಮುಳುಗಿ ಹೋಗುತ್ತಾರೆ. ದೇಶಕ್ಕೆ ಬಹಳ ಕೆಡಕು ಆಗುತ್ತದೆ.

ರಿಸಂಪ್‌ಶನ್ ಆಫ್ ಲ್ಯಾಂಡ್ಸ್ ವಿಚಾರ ಹೇಳಿದೆ. ಯಾವ ಯಾವ ಜಮೀನನ್ನು ಯಾವ ಯಾವ ಸಂಧರ್ಭದಲ್ಲಿ ತೆಗೆದುಕೊಳ್ಳಬೇಕೆಂಬುದನ್ನು ನಿರ್ಧಾರಪಡಿಸಬೇಕು.

ಕ್ಲಾಜ್ 63ರ ಪ್ರಕಾರ ಸೀಲಿಂಗ್ ಆನ್ ಲ್ಯಾಂಡ್ ಹಾಕುತ್ತೀರ. ಒಂದು ಫ್ಯಾಮಿಲಿಯಲ್ಲಿ ಐದು ಜನವಿದ್ದರೆ ಒಂದು ಫ್ಯಾಮಿಲಿ ಹೋಲ್ಡಿಂಗ್ ಕೊಟ್ಟಿದ್ದೀರಿ. ಐದು ಜನಕ್ಕೆ ಮೀರಿದ್ದರೆ, ಒಬ್ಬ ಅಡಿಶನಲ್ ಮೆಂಬರಿಗೆ ಅದೇ; ಇನ್ನೊಂದು ಫ್ಯಾಮಿಲಿ ಹೋಲ್ಡಿಂಗ್ ಕೊಡಬಹುದು. Hindu law ಪ್ರಕಾರ a child in the want of a Mother has got every right for the family property ಒಬ್ಬ ಹೆಂಗಸು ಗರ್ಭಿಣಿಯಾಗಿದ್ದರೆ, ಜನನವಾದ ನಂತರ ಹುಟ್ಟುವ ಮಗುವಿಗೆ ಒಂದು ಹಕ್ಕು ಬರುತ್ತದೆ. ಆದರೆ ನೀವು ಈವಾಗ ಜಮೀನು ಕಿತ್ತುಕೊಂಡಿರುತ್ತೀರ; ಮಗುವು ಹುಟ್ಟುತ್ತದೆ; ಆವಾಗಿನಿಂದ ಆ ಫ್ಯಾಮಿಲಿಗೆ ಜಾಸ್ತಿ ಹೋಲ್ಡಿಂಗಿಗೆ ಹಕ್ಕಿದೆ.

(ಶ್ರೀ ಜಿ. ಎನ್. ಪುಟ್ಟಣ್ಣ)

ಇದಕ್ಕೆ ನೀವು ಪ್ರಾವಿಶನ್ ಮಾಡಿಲ್ಲ. ಇದಕ್ಕೆ ಅಮೆಂಡ್‌ಮೆಂಟ್ ಬರಬಹುದು. ಇದನ್ನು ಅಮೆಂಡ್‌ಮೆಂಟ್ ಮಾಡದಿದ್ದರೆ ದೊಡ್ಡ ಗಲಾಟೆಯಾಗುತ್ತದೆ.

ತೆಂಗು ಮತ್ತು ಅಡಿಕೆಗೆ ಮೊಟ್ಟಮೊದಲಿನಲ್ಲಿ ಎಕ್ಸೆಂಪ್ಶನ್ ಕೊಟ್ಟು ಈಚೆಗೆ ತೆಗೆದುಹಾಕಿಬಿಟ್ಟಿದ್ದೀರಿ. ಏಕೆ ತೆಗೆದುಹಾಕಿದ್ದೀರಿ ಎನ್ನುವುದಕ್ಕೆ ಕಾರಣ ತಿಳಿಸಿಲ್ಲ. ನಿಮ್ಮ ಕೈಲಿ ಪವರ್ ಇದೆ. ಏನು ಬೇಕಾದರೂ ಮಾಡಬಹುದೆಂದು ಮಾಡುತ್ತೀರ. Exemption ತೆಗೆದುಹಾಕಿದ್ದಕ್ಕೆ ಕಾರಣಗಳನ್ನು ಏಕೆ ತಿಳಿಸಿಲ್ಲ. ಒಂದು ತೆಂಗಿನ ತೋಟ ಫಸಲಿಗೆ ಬರಬೇಕಾದರೆ ಎಂಟು ಹತ್ತು ವರ್ಷ ಬೇಕಾಗುತ್ತದೆ. ನಮ್ಮನ್ನು ಈ ರೀತಿ ಮಾಡಬೇಡಿ ಎಂದು ಹೇಳುವುದಿಲ್ಲ. ಮಾಡುವಾಗ ಏಕೆ ಮಾಡಿದ್ದೀರೆನ್ನುವುದು ಅಸೆಂಬ್ಲಿಗೂ ಗೊತ್ತಾಗಬೇಕು. ಮೂಲಗೇಣಿ ಹಕ್ಕು ಏನು ಎನ್ನುವುದು ಮೈದಾನದಲ್ಲಿ ಅನೇಕರಿಗೆ ಗೊತ್ತಿಲ್ಲ. ಮೂಲಗೇಣಿ ಹಕ್ಕಿರುವವರಿಗೆ ಎಕ್ಸೆಸ್ ಜಮೀನು ಬರುತ್ತದೆ; ಒಬ್ಬೊಬ್ಬನಿಗೆ 20-30 ಸ್ಟ್ಯಾಂಡರ್ಡ್ ಎಕರೆ ಜಾಸ್ತಿ ಬರುತ್ತದೆ. ಜಾಸ್ತಿ ಬಂದಹಾಗೆ ಏಕೆ ಪ್ರಾವಿಶನ್ ಮಾಡಿಲ್ಲ. ಮೂರಗೇಣಿ ಹಕ್ಕಿದ್ದರೆ, ಎಕ್ಸೆಸ್ ಬಂದರೆ ಸರ್ಕಾರಕ್ಕೆ ತೆಗೆದುಕೊಳ್ಳಬೇಕು. ಬಿಟ್ಟಿದ್ದನ್ನು ಸೇರಿಸಿಕೊಳ್ಳಲು ಮುಂದಾದರೂ ಪ್ರಾವಿಶನ್ ಮಾಡುತ್ತೀರ !

ನಮ್ಮ ಕೋಆಪರೇಶನ್ ಮಿನಿಸ್ಟರು ಇಲ್ಲದ್ದಾರೆ. ನನಗೆ ರಿಪೋರ್ಟಿನ ಪ್ಯಾರ 89, 92 ಅರ್ಥವಾಗುತ್ತಿಲ್ಲ. ಇದರಿಂದ ದೇಶಕ್ಕೆ ಉಪಯೋಗ ಮಾಡುತ್ತೀರ ? ಇದನ್ನು ನೋಡಿದರೆ ಒಂದು ದೊಡ್ಡ ಸಮಸ್ಯೆ. ದಾವಣಗೆರೆಯಲ್ಲಿ ನಾಲ್ಕು ಐದು ಅಣ್ಣತಮ್ಮಂದಿರು ಇರುತ್ತಾರೆ. ಅವರು ಸೇರಿಕೊಂಡು ಒಂದು ಫಾರ್ಮ್ ಮಾಡಿಕೊಂಡಿದ್ದಾರೆ. ಇನ್ನೂ ಕೆಲವು ಕಡೆ ಹೀಗೆ ಮಾಡಿದ್ದಾರೆ. ನಿಮ್ಮ 89ರ ಪ್ರಕಾರ Any ten or more persons of a village or two or more Contiguous villages holding between them...may apply for the registration ಎಂದಿದೆ. ಒಂದೇ ಗ್ರಾಮದವರು ಸೇರಿಕೊಂಡು ಏಕೆ ಕೋಆಪರೇಟೀವ್ ಫಾರ್ಮ್ ಮಾಡಿಕೊಳ್ಳಬಾರದು ; ಒಂದೇ ರೈತನ ಸಂಸಾರದಲ್ಲಿ ನಾಲ್ಕು-ಐದು ಜನ ಅಣ್ಣತಮ್ಮಂದಿರು ಸೇರಿಕೊಂಡು ಏತಕ್ಕೋಸ್ಕರ ಫಾರ್ಮ್ ಮಾಡಬಾರದು ? ಅದಕ್ಕೆ 89ರ ಪ್ರಕಾರ Any ten or more persons ಎಂದು ನಿಮ್ಮ ರಿಸ್ಟ್ರಿಕ್ಷನ್ ಏಕೆ ! Ten or more persons ಎಂದರೆ, ಹತ್ತಕ್ಕೆ ಕಡಿಮೆ ಇದ್ದರೆ ಆಗುವುದಿಲ್ಲ. ಒಂದೇ ಫ್ಯಾಮಿಲಿಯವರಿಂದ ಏತಕ್ಕೋಸ್ಕರ ಆಗಬಾರದು ? ಪಾರ್ಟ್ನರ್ಷಿಪ್ ಮಾಡಿಕೊಂಡು ಮಾಡಬಾರದು. ಎರಡನೆಯದು ಎರಡು ಗ್ರಾಮದವರು ಫಾರ್ಮ್ ಮಾಡಿಕೊಳ್ಳುವುದಕ್ಕೆ ಏಕೆ ಸೇರಿಕೊಳ್ಳಬೇಕು. ಅದಕ್ಕೆ ಒಂದೇ ಕಂಟಿನ್ಯುಯಸ್ ವಿಲೇಜ್ ಏಕೆ ಆಗಬಾರದು ! ಒಂದೇ ಗ್ರಾಮದ ಹತ್ತು ಜನರು ಸೇರಿಕೊಂಡು ಕೋಆಪರೇಟೀವ್ ಫಾರ್ಮ್ ಏಕೆ ಪ್ರಾರಂಭ ಮಾಡಬಾರದು ? ಈಗ ಒಂದು ಸೊಸೈಟಿ ಮಾಡಿಕೊಳ್ಳುವಾಗ, ಬಾಕಿ ಗ್ರಾಮದವರು ಬರುತ್ತಿದ್ದಾರೆಯೇ ! Two or more contigious villages ಎಂದು What is the big idea behind it ?

†Sri MALI MARIYAPPA.—I think the clause is very clear. Number 1 is, 10 persons may belong to only one village. They have right to form a co-operative society. The other alternative is two or more villages—for example, there are two villages. In one village there are eight people. Just in another village, only two people are there. Even then a society is possible. If there are three more societies, for efficiency of co-operative farming, they have said they must be contiguous.

Sri G. N. PUTTANNA.—It is not clear. ಎಂದರೆ, ಇಬ್ಬರು ಅಥವಾ ನಾಲ್ಕು ಜನ ಸೇರಿಕೊಂಡು ಒಂದೇ ಗ್ರಾಮದವರು ಸೇರಬೇಕೆನ್ನುವುದು ಕ್ಲಿಯರಾಗಿಲ್ಲ.

ಆಮೇಲೆ 92ನೇ ಕ್ಲಾಜಿನಲ್ಲಿ ಸೀಲಿಂಗ್ ಇಟ್ಟಿರುವುದನ್ನು ನೋಡಿದರೆ ಸೊಸೈಟಿಯಲ್ಲಿ ಯಾರಿಗೆ ಡಿಕ್ಟೇಟರು ಷಿಪ್ ಸಿಗುತ್ತದೋ ಅಂತಹವರು ಈ ಸೊಸೈಟಿಗೆ ಸೇರಬೇಕು. ಈ ಸೊಸೈಟಿಗೆ ಸೇರಿದ ಮೇಲೆ ಅವನು ಬಿಟ್ಟು ಹೋಗುವುದಕ್ಕೆ ಆಗುವುದಿಲ್ಲ. ಇದು ಡೆಮಾಕ್ರಸಿಯೇ। ಇದರ ಲ್ಲೇನು ಅರ್ಥವಿದೆ। ಅಷ್ಟೇ ಅಲ್ಲದೆ ಈಗ ಸೊಸೈಟಿಯಲ್ಲಿ 8-9 ಜನ ಸೇರಿಕೊಂಡು ಅವರೇ ದೊಡ್ಡ ಮನುಷ್ಯರಾಗಿ ದುಡ್ಡನ್ನು ಲಪಟಾಯಿಸುತ್ತಿರುವುದನ್ನು ನೋಡಿದ್ದೇವೆ. ಹೀಗೆ ಪ್ರತಿ ಜಿಲ್ಲೆ ಯಲ್ಲಿಯೂ 30, 40, 50 ಸೊಸೈಟಿಗಳಲ್ಲಿ ದುಡ್ಡನ್ನು ನುಂಗುತ್ತಿರುವುದು ನಮಗೆ ಕೇಳಿ ಬರುತ್ತಿದೆ. ಇದನ್ನು ತಾವು ಸ್ವಲ್ಪ ಆಲೋಚನೆ ಮಾಡಬೇಕು.

Sri MALI MARIYAPPA.—You please explain. Suppose there are ten people. A person who owns about two acres—a well is dug just in the middle of ten acres of a contiguous area. After one year, when the well is finished, he wants to retire. Should there not be reasonable conditions ?

ಶ್ರೀ ಜಿ. ಎಚ್. ಪುಟ್ಟಣ್ಣ.—ತಾವು ಕಂಡೀಷನ್‌ಗಳನ್ನು ಹಾಕಿದರೆ ಒಪ್ಪಿಕೊಳ್ಳುತ್ತೇನೆ ಒಂದು ವೇಳೆ ಅಂತಹ ಕಂಡಿಷನ್ನುಗಳಿಗೆ ಒಪ್ಪದೆ ಸೊಸೈಟಿಯನ್ನು ಬಿಟ್ಟುಹೋಗುವಾಗ ಆತನಿಂದ ಬಾವಿಗಾಗಿರುವ ಚಾರ್ಜನ್ನು ಹಾಕಿಬಿಟ್ಟು ಹತ್ತುಜನರಿರುವ ಸೊಸೈಟಿಯಲ್ಲಿ ಉಳಿಕೆಯಾದ ಒಂಬತ್ತು ಜನ ಆ ಸೊಸೈಟಿಯಲ್ಲಿರಲು ಆಗುವುದಿಲ್ಲ. ಏಕೆಂದರೆ ಹತ್ತು ಜನಕ್ಕೆ ಕಮ್ಮಿ ಇರಕೂಡ ದೆಂದು ಇದೆ. ಹೀಗೆ ಈ ಕ್ಲಾಸಿನಲ್ಲಿ ತಪ್ಪರ್ಥ ಬರುವ ಹಾಗೆ ಇದೆ. ಇದನ್ನು ಪರಿಶೀಲನೆ ಮಾಡಬೇಕು.

Sri J. B. MALLARADHYA.—Supposing in a co-operative Society, there are only ten people, and that the last member withdraws. Then it becomes in-operative on account of the tenth man. Under what condition can a member withdraw? If it is the case of tenth man only, the society cannot exist. Even if there are more than ten or hundred, if one or two wants to go, if his intentions are *bona fide*, you must make some provision. He must be penalised, for voluntarily going out. His coming in is voluntary. You are now introducing in a different manner.

Sri MALI MARIYAPPA.—The suggestion can be worked out when rules are worked out.

†ಶ್ರೀ ಜಿ. ಎಚ್. ಪುಟ್ಟಣ್ಣ.—Schedule I, part "A"ನಲ್ಲಿ first class—wet land or garden land possessing facilities for assured irrigation where two crops of paddy can be raised in a year ಎಂದಿದೆ. How many years prior to that ? ಇದನ್ನು ಪ್ರಿಸ್‌ಕ್ರೈಬ್ ಯಾರು ಮಾಡಿದ್ದಾರೆ ? ಇದರಲ್ಲಿ ಒಂದರ್ಥ ಬರುತ್ತದೆ. ಒಂದು ವರ್ಷದಲ್ಲಿ ಕೆರೆ ಕಾಲುವೆ ಇದ್ದು ದೇವರ ದಯೆಯಿಂದ ಮಳೆ ಬಂದು ನೀರು ತುಂಬಿರು ವಾಗ ಆ ವರ್ಷದಲ್ಲಿ ಎರಡು ಬೆಳೆ ತೆಗೆದುಕೊಳುತ್ತಾನೆ. ಇಲ್ಲಿ ಹೇಳಿರುವಂತೆ first class landನ ವಿವರವನ್ನು ನೋಡುವಾಗ ಇನ್ನೊಂದೇನಾಗುತ್ತದೆ ಎಂದರೆ ವೆಟ್ ಲ್ಯಾಂಡ್ ಇರುವ ಕೆಲವು ಕಡೆ ಭಾವಿಗಳನ್ನು ತೆಗೆದು ಎರಡೆರಡು ಬೆಳೆಗಳನ್ನು ತೆಗೆಯುವಾಗ ಇಲ್ಲಿ Assured water supply ಎಂದು ಆಲೋಚನೆ ಮಾಡಿದ್ದಾರೆ. ಆದರೆ ಮಳೆ ಬಾರದೆ ಇದ್ದಾಗ ಒಂದು ವರ್ಷದಲ್ಲಿ ರೈತ ಒಂದೇ ಬೆಳೆ ತೆಗೆಯುತ್ತಾನೆ. ಹೀಗೆ ಇರುವುದನ್ನು ಇಲ್ಲಿ ಗಮನಕ್ಕೆ ತೆಗೆದುಕೊಂಡಿಲ್ಲ. ಒಂದು ವರ್ಷದಲ್ಲೇ ಅಥವಾ ಎಷ್ಟು ವರ್ಷಗಳ ಕಾಲದಲ್ಲಿ ಎನ್ನುವುದನ್ನು ಇಲ್ಲಿ ಗಮನಕ್ಕೆ ತೆಗೆದುಕೊಂಡಿಲ್ಲ.

ಪುಟ 44ರಲ್ಲಿ ಜಾಯಿಂಟ್ ಫ್ಯಾಮಿಲಿ ಎನ್ನುವುದನ್ನು ಅರ್ಥ ವಿವರಣೆ ಕೊಟ್ಟಿದ್ದಾರೆ. ನಾನು ಇದರ ಬಗ್ಗೆ ಮಾನ್ಯ ರೆವಿನ್ಯೂ ಮಂತ್ರಿಗಳನ್ನು ಕ್ಲಾರಿಫಿಕೇಷನ್ ಕೇಳಿದಾಗ ಅವರು

(ಶ್ರೀ ಬಿ. ಎನ್. ಪುಟ್ಟಣ್ಣ)

Joint familyಯನ್ನು ಮಾತ್ರ ಡಿಫೈನು ಮಾಡಲಾಗಿದೆ Divided family ಎನ್ನುವುದನ್ನು ಡಿಫೈನು ಮಾಡಿಲ್ಲ ಎಂದರು. ಹೀಗೆ ಮಾಡದೆ ಹೋದರೆ ಇದರ ಉದ್ದೇಶಕ್ಕೆ ಧಕ್ಕೆ ಬರುತ್ತದೆ. ಡಿವೈಡೆಡ್ ಫ್ಯಾಮಿಲೀಗಳಲ್ಲಿ ಒಂದು ಪಾರ್ಟಿಷನ್ನು ಡೀಡು ರಿಜಿಸ್ಟರಾಗಿರುವುದು ಇನ್ನೊಂದು unregistered, ಇನ್ನೊಂದು ಪಾಲುಪಟ್ಟಿ, unregistered, ಹೀಗೆ ಹಳ್ಳಿಗಳಲ್ಲಿ ಎಷ್ಟೋ ಕಡೆ ಕಂದಾಯ ಕೊಟ್ಟುಕೊಂಡು ಬರುತ್ತಿರುತ್ತಾರೆ. ಆಗ ಇಂತಹ ವಿಚಾರವನ್ನು ಟ್ರಿಬ್ಯುನಲ್ಲಿಗೆ ತೆಗೆದುಕೊಂಡು ಹೋದರೆ According to law register ಆಗಿಲ್ಲ ಎಂದು ಹೇಳಿದರೆ ಆ ರೈತನ ಗತಿ ಏನಾಗಬೇಕು ? Divided family ಎಂದು ಬೇಕಾದರೆ ಹಾಕಿ ಲ್ಯಾಂಡ್ ರೆವಿನ್ಯೂ ಬೇರೆ, ಪಹಣಿ ಲೆಕ್ಕ ಬೇರೆ, ಅಲ್ಲದೆ ಪಾಲುಪಟ್ಟಿ ಅನ್ ರಿಜಿಸ್ಟರ್ ಆಗಿರುವುದು ಬೇರೆ. ಹೀಗೆ ಇವೆಲ್ಲವನ್ನೂ ಸ್ವಲ್ಪ ತಾವು ಆಲೋಚನೆ ಮಾಡಿ ಮುಖ್ಯವಾದ ಈ ಬಿಲ್ಲನ್ನು ತಂದು ಹಳ್ಳಿಗಳಿಂದ ಬರುವ ಜನ ರೊಟ್ಟಿ ಬುತ್ತಿ ಕಟ್ಟಿಕೊಂಡು ಮಧುಗಿರಿ ಮತ್ತು ತುಮಕೂರು ಅಥವಾ ಇನ್ನಿತರ ಕಡೆ ಇರುವ ಲಾಯರುಗಳ ಮನೆ ತಿರುಗಿ ಸತ್ತು ಸುಣ್ಣವಾಗಿ ಮಾಡಿಕೊಳ್ಳುವ ಅವಕಾಶ ಕೊಡಬಾರದು. ಇನ್ನು ಟ್ರಿಬ್ಯುನಲ್ಲು ಎಂದು ಮಾಡಿ ಅಲ್ಲಿ ಮುನಿಸೀಪರುಗಳು ಇರುವುದನ್ನು ತೆಗೆದುಹಾಕಿ ಸಿವಿಲ್ ಜಡ್ಜುಗಳನ್ನು ಇಟ್ಟರೆ ಬಹಳ ಒಳ್ಳೆಯದು. ಇದ್ದಕ್ಕೇನೂ Extra Appointments ಮಾಡಬೇಕಾಗಿಲ್ಲ. ಈಗ ದೇಶದಲ್ಲಿರುವ ಸಿವಿಲ್ ಜಡ್ಜ್‌ಗಳ ಜುರಿಸ್‌ಡಿಕ್ಷನ್ನಿಗೇನೆ ಈ ಕೆಲಸವನ್ನು ವಹಿಸಿದರೆ ಚೆನ್ನಾಗಿರುತ್ತದೆ. ಇದರಿಂದ ಮುಂದೆ ಜಮೀನು ಮಾಡುವವರೆಗೂ ಉತ್ತೇಜನ ಬರುತ್ತದೆ. ಕೊಂಚ ಎಲ್ಲರಿಗೂ ಅನುಕೂಲವಾಗುವಂತೆ ಮಾಡುವುದು ಒಳ್ಳೆಯದು.

ಇಷ್ಟನ್ನು ಹೇಳುತ್ತಾ ಒಟ್ಟಿನಲ್ಲಿ ಈ ವಿಧೇಯಕವನ್ನು ಸರ್ಕಾರದವರು ಬಹಳ ಕೂಲಂಕಷವಾಗಿ ಆಲೋಚನೆ ಮಾಡಿ ಪ್ಲಾನಿಂಗ್ ಕಮಿಷನ್ನಿನವರು ಕೊಟ್ಟಿರತಕ್ಕ ಹಾಗೆ ಇಲ್ಲಿ ಮಾಡಲು ಅವಕಾಶ ಕೊಡದೆ, ಮುಖ್ಯವಾಗಿ ರೈತರು ಅದರಲ್ಲೂ ಹಳ್ಳಿಯ ಜನಗಳು ವಿಶೇಷವಾಗಿ ದಿನಬೆಳಗ್ಗೆಯಾದರೆ ಕೋರ್ಟಿಗೆ ಬಂದು ಸತ್ತುಸುಣ್ಣವಾಗಿ ತೊಂದರೆ ಪಡುತ್ತಿರುವುದನ್ನು ತಪ್ಪಿಸಿ ಅವರು ಇಂತಹ ಯಾವೊಂದು ತೊಂದರೆಯನ್ನು ಮುಂದೆ ಪಡೆಯಲು ಅವಕಾಶವಿಲ್ಲದಂತೆ ಈ ವಿಧೇಯಕವನ್ನು ಮಾಡಬೇಕು.

ಕೊನೆಯದಾಗಿ ಅಧ್ಯಕ್ಷರು ನನಗೆ ಈ ವಿಧೇಯಕದ ಮೇಲೆ ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ಸರ್ಕಾರದವರು ದಯವಿಟ್ಟು ಈ ವಿಧೇಯಕವನ್ನು ಏಕಕಾಲದಲ್ಲಿ ಒಂದೇ ಸಾರಿ ಇಡೀ ಸಂಸ್ಥಾನದಲ್ಲಿ ಜಾರಿಗೆ ತರಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ—ಜೈಜಗತ್.

ಶ್ರೀ ಟಿ. ತಾರೇಗೌಡ (ಸಿರಾ).—ಸ್ವಾಮಿ, ಈ ಭೂಸುಧಾರಣೆ ಮಸೂದೆ ಹಿಂದೆ ಜತ್ತಿ ಕಮಿಟಿ ವರದಿಯಮೇಲೆ ಒಂದುಸಲ ಈ ಸಭೆಯಲ್ಲಿ ಚರ್ಚೆಯಾಗಿದೆ. ಈಗ ಸೆಲೆಕ್ಟ್ ಕಮಿಟಿ ವರದಿಯೊಡನೆ ಬಂದಿರತಕ್ಕ ಈ ಭೂಸುಧಾರಣೆ ಮಸೂದೆ ಮೇಲೆ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಲು ನನಗೆ ಅಧ್ಯಕ್ಷರು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಕ್ಕಾಗಿ ನಾನು ಪ್ರಥಮತಃ ಅವರನ್ನು ವಂದಿಸುತ್ತಾ ಕೆಲವು ಮಾತುಗಳನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಮಾನ್ಯ ವಿರೋಧ ಪಕ್ಷದ ನಾಯಕರು ಈ ಮಸೂದೆಯನ್ನು ಹಾಫ್–ಹಾರ್ಟೆಡ್ ಆಗಿ ಸ್ವಾಗತಿಸುತ್ತಾ, ಈ ಮಸೂದೆಯನ್ನು ಇಲ್ಲಿ ಮಂಡಿಸಲು ನಿಧಾನವಾಯಿತು, 44 ಜನಗಳು ಕೂಡಿದ್ದಂತಹ ಸೆಲೆಕ್ಟ್ ಕಮಿಟಿಯಲ್ಲಿ ಹೆಚ್ಚು ಹಣ ಖರ್ಚು ಮಾಡಿ ದೀರ್ಘಾವಧಿಕಾಲ ತೆಗೆದುಕೊಂಡು ಇದನ್ನು ಬಹಳ ಸಾವಧಾನದಿಂದ ಇಲ್ಲಿ ಚರ್ಚೆ ಮಾಡಬೇಕೆಂದು ತಂದಿದ್ದಾರೆ. ಇದರಿಂದ ಭೂಸುಧಾರಣೆಯ ಉದ್ದೇಶಕ್ಕೆ ಭಂಗ ಬಂದಿದೆ. ಈ ರೀತಿ ನಿಧಾನವಾಗಿರುವುದರಿಂದ ಅದರಲ್ಲೂ ಚುನಾವಣೆ ಹತ್ತಿರದಲ್ಲಿ ಬರುತ್ತಿರುವುದರಿಂದ ಕೆಲವಾರು ಅಡಚಣೆಗಳು ಉಂಟಾಗುತ್ತಿವೆ, ಮತ್ತು ಎಲೆಕ್ಷನ್ ಉದ್ದೇಶದಿಂದಲೇ ಈ ಮಸೂದೆಯನ್ನು ಈಗ ತಂದಿದ್ದಾರೆಂಬುದಾಗಿ

ಹೇಳಿದರು. ಮುಂದಿನ ಎಲೆಕ್ಷನ್ ಆಗುವುದರೊಳಗೇ ಇದನ್ನು ಜಾರಿಮಾಡಿಬಿಡಬೇಕೆಂಬ ಉದ್ದೇಶ ವನ್ನು ಇಟ್ಟುಕೊಂಡಿದ್ದಾರೆಂದೂ ಹೇಳಿದರು.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಎಲೆಕ್ಷನ್ ವಿಷಯವನ್ನೇ ನಾನು ಹೇಳಲಿಲ್ಲ.

ಶ್ರೀ ಟಿ. ತಾರೇಗೌಡ.—ಏನು ಕೆಲಸಮಾಡಿದರೆ ಚುನಾವಣೆಯಲ್ಲಿ ಓಟನ್ನು ಗಳಿಸಬಹುದು ಎಂಬುದಾಗಿ ಶ್ರೀಮಾನ್ ಪುಟ್ಟಣ್ಣನವರು, ಪಿ. ಎಸ್. ಪಿ. ಮಾನ್ಯ ಸದಸ್ಯರಾದ ಶ್ರೀಮಾನ್ ನರಸಿಂಹೇಗೌಡರು ಹೇಳಿದರು. ಅದೂ ಅಲ್ಲದೆ ಅವರು ಇನ್ನು ನಿಧಾನ ಮಾಡಿದರೆ ಆಡಳಿತ ಪಕ್ಷದವರ ಉದ್ದೇಶ ನೆರವೇರಲಾರದು, ಇದರಿಂದ ಹೆಚ್ಚು ಜನ ರೈತರಿಗೆ, ಅದರಲ್ಲೂ ಮುಖ್ಯವಾಗಿ ಗೇಣಿದಾರರಿಗೆ ಹೆಚ್ಚಿಗೆ ಅನುಕೂಲವಾಗಲಿಲ್ಲ. ಜಮೀನು ಉಳುವವರೆಲ್ಲರಿಗೂ ಫಲ ಅಷ್ಟಾಗಿ ಸಿಗುವುದಿಲ್ಲ ಎನ್ನುವ ಅನುಮಾನವನ್ನು ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ನಾನು ತಿಳಿಸುವುದು ಏನೆಂದರೆ ಈ ಭೂ ಸುಧಾರಣೆಯನ್ನು ಇಡೀ ದೇಶದಲ್ಲಿ ಬಹಳ ಕಾಲದಿಂದಲೂ ಏಕಕಾಲದಲ್ಲಿ ಜಾರಿಗೆ ತರಬೇಕೆಂದೂ ಎಲ್ಲಾ ರಾಜಕೀಯ ಪಕ್ಷಗಳು ಒತ್ತಾಯ ಮಾಡುತ್ತಿವೆ. ಆದರೆ ನಮ್ಮ ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ವಿರೋಧಪಕ್ಷದ ಸದಸ್ಯರು ಮತ್ತು ಇತರ ಪಕ್ಷದ ಸದಸ್ಯರು ತಂತಮ್ಮ ಅಭಿಪ್ರಾಯ ವ್ಯಕ್ತಪಡಿಸಿದಂತೆ ಇದು ಜಾಗ್ರತೆ ಜಾಗ್ರತೆಯಾಗಿ ತಕ್ಷಣ ಜಾರಿಗೆ ತರತಕ್ಕಂತಹ ಮಸೂಧೆಯಲ್ಲ. ಏಕೆಂದರೆ ಈಗ ನಮ್ಮ ಭಾರತದೇಶ ನೈಸರ್ಗಿಕವಾಗಿ ಹಿಮಾಲಯದಿಂದ ಕನ್ಯಾಕುಮಾರಿಯವರೆಗೂ ವಿವಿಧ ರೂಪಗಳಿಂದ ಕೂಡಿದೆ. ಬೆಟ್ಟಗುಡ್ಡಗಳ ನಾಡು, ಫಲವತ್ತಾದ ಪುಣ್ಯ ನದಿಗಳ ಬೀಡು ಮತ್ತು ಬಯಲು ನಾಡು—ಹೀಗೆ ನಾನಾ ವಿಧ ವಾಗಿರತಕ್ಕ ಪ್ರದೇಶವಾಗಿದೆ. ಅಲ್ಲದೆ ನಮ್ಮ ಭಾರತ ದೇಶದಲ್ಲಿರತಕ್ಕ 14-15 ಸಂಸ್ಥಾನಗಳ ರಾಜ್ಯಗಳೂ ಕೂಡ ಒಂದೇ ವಿಧವಾಗಿಲ್ಲ. ಆದ್ದರಿಂದ ಎಲ್ಲಾ ರಾಜ್ಯಗಳಲ್ಲೂ ಒಂದೇ ರೀತಿಯಲ್ಲಿ ಒಂದೇ ಮಾದರಿಯಾಗಿರತಕ್ಕ ಭೂ ಸುಧಾರಣೆಯನ್ನು ಪ್ಲಾನಿಂಗ್ ಕಮಿಷನ್ನಿನವರ ಸಲಹೆ ಯಂತಾಗಲೀ ಅಥವಾ ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್ ಸಲಹೆಯಂತಾಗಲೀ ಯಾವ ಒಂದು ರಾಜಕೀಯ ಪಕ್ಷವೇ ಆಗಲೀ ಸರ್ವಸಮ್ಮತವಾದ ರೀತಿಯಲ್ಲಿ ಜಾರಿಗೆ ತರಲು ಸಾಧ್ಯವಿಲ್ಲ ಎಂಬುದನ್ನು ಈ ಸಭೆಯ ವಿರೋಧಪಕ್ಷದ ನಾಯಕರು ಮತ್ತು ಸದಸ್ಯರೆಲ್ಲರೂ ಚೆನ್ನಾಗಿ ತಿಳಿದುಕೊಂಡಿದ್ದಾರೆಂದು ನಾನು ಭಾವಿಸಿದ್ದೇನೆ. ಇಂತಹ ಸಂದರ್ಭದಲ್ಲಿ ವಿರೋಧಪಕ್ಷದ ಸದಸ್ಯರು "ಒಲ್ಲದ ಗಂಡನಿಗೆ ಮೊಸರಿನಲ್ಲಿ ಕಲ್ಲು" ಸಿಕ್ಕುವ ಹಾಗೆ ಕೆಲವಾರು ಟೀಕೆಗಳನ್ನು ಆಡಳಿತ ಪಕ್ಷದವರಮೇಲೆ ಮಾಡಿದ್ದಾರೆ. ಎಲೆಕ್ಷನ್ ಮ್ಯಾನಿಫೆಸ್ಟೋ ವಿಷಯವಾಗಿ ಕುರಿತು ಭಾಷಣಗಳನ್ನು ಮಾಡಿದ್ದಾರೆ. ಎಲ್ಲಾ ರಾಜಕೀಯ ಪಕ್ಷಗಳು ತಿಳಿಸಿದಂತೆ ಈ ಭೂ ಸುಧಾರಣೆಯನ್ನು ಜಾರಿಗೆ ತರಬೇಕೆಂಬ ಉದ್ದೇಶದಿಂದ ಹಿಂದೆ 1957ನೇ ಇಸವಿಯಲ್ಲಿ ಚುನಾವಣೆಯಾದನಂತರ ಶ್ರೀಮಾನ್ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದಂಥ ಕಾಲದಲ್ಲಿ ಈಗ ಮಾನ್ಯ ಮುಖ್ಯಮಂತ್ರಿಗಳಾಗಿರುವ ಶ್ರೀಮಾನ್ ಜತ್ತಿಯವರ ಅಧ್ಯಕ್ಷತೆಯಲ್ಲಿ ಒಂದು ಭೂ ಸುಧಾರಣೆಯ ಕಮಿಟಿಯನ್ನು ಸ್ಥಾಪನೆಮಾಡಿ, ಅವರೆಲ್ಲರೂ ಮೈಸೂರು ದೇಶದ ವಿವಿಧ ಭಾಗಗಳಲ್ಲಿ ಸಂಚರಿಸಿ ವಿಶೇಷವಾದ ಅಂಕಿ ಅಂಶಗಳನ್ನು ಶೇಖರಿಸಿ ಈ ಪ್ರಜಾಪ್ರಭುತ್ವದಲ್ಲಿ ಹೆಚ್ಚು ವರ್ಗದ ಜನರಿಗೆ ಇದರಿಂದ ನೋವಾಗದ ರೀತಿಯಲ್ಲಿ ಅದರಲ್ಲೂ ಮುಖ್ಯವಾಗಿ ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಭೂ ಸುಧಾರಣೆಗಳನ್ನು ಮಾಡಬೇಕೆಂಬ ಸದುದ್ದೇಶದಿಂದ ಒಂದು ವರದಿಯನ್ನು ಒದಗಿಸಿದ್ದರು. ಆ ವರದಿ ಈ ಮಾನ್ಯ ಸಭೆಯಲ್ಲಿ ಹಿಂದೆ ಬಹು ದೀರ್ಘವಾಗಿ 10 ದಿವಸಗಳಕಾಲ ಚರ್ಚೆಯಾಯಿತು. ಆಗಲೂ ಇದೇ ವಾದವನ್ನು ಮಾನ್ಯ ವಿರೋಧಪಕ್ಷದ ಸದಸ್ಯರು ಮಾಡಿದರು. ಈಗ ಕೆಲವಾರು ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಂದ ಕೂಡಿದ ಸೆಲೆಕ್ಟ್ ಕಮಿಟಿ ವರದಿಯ ಮೇಲೆ ಮಾತನಾಡು ವಾಗಲೂ ಅದೇ ವಾದವನ್ನು ಮಾಡುತ್ತಿದ್ದಾರೆ. ಅದರ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತ ಪಡಿಸುವ ಸಂದರ್ಭದಲ್ಲಿ ಈಗಲೂ ಈ ಮಸೂದೆಯನ್ನು ಸರ್ವಸಮ್ಮತವಾಗಿ ಒಪ್ಪತಕ್ಕ ರೀತಿಯಲ್ಲಿ ರಚನೆ ಮಾಡಿಲ್ಲ ಎಂಬುದಾಗಿ ವಾದ ಮಾಡುತ್ತಿದ್ದಾರೆಂದು ನಾನು ಹೇಳಬೇಕಾಗಿದೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಈಗ ಎಲೆಕ್ಷನ್ ಟೈಂ ಎಂದು ಆರೀತಿ ಹೇಳುತ್ತೀರಾ?

ಶ್ರೀ ಟಿ. ತಾರೇಗೌಡ.—ಹೆಚ್ಚು ಜನರಿಗೆ ಅನುಕೂಲವಾಗುವ ರೀತಿಯಲ್ಲಿ ಮಾಡಬೇಕೆಂಬ ಉದ್ದೇಶದಿಂದ ಈ ಮಸೂದೆ ಈ ಸಭೆಯಲ್ಲಿ ಇಂಟ್ರಡ್ಯೂಸ್ ಮಾಡಿದ್ದಾರೆ. ಜಾಯಿಂಟ್ ಸೆಲೆಕ್ಟ್ ಕಮಿಟಿಯಲ್ಲಿ ಸುಮಾರು 44 ಜನರನ್ನೊಳಗೊಂಡು ಅಂದರೆ ಕಾಂಗ್ರೆಸ್ ಪಕ್ಷದವರು, ಪಿ. ಎಸ್. ಪಿ. ಯವರು, ಸ್ವತಂತ್ರರು, ಮತ್ತೂ ಮಹಾರಾಷ್ಟ್ರ ಸಮಿತಿಯವರೂ ಹೀಗೆ ಎಲ್ಲ ಪಕ್ಷದವರೂ ಇದ್ದಾರೆ. ಅವರೆಲ್ಲರ ಸಲಹೆಗಳನ್ನೊಳಗೊಂಡ ವರದಿಯನ್ನು ಈಗ ನಾವು ಚರ್ಚೆ ಮಾಡುತ್ತಿದ್ದೇವೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಕಮ್ಯೂನಿಸ್ಟ್ ಅವರು ಅಲ್ಲ ಇರಲಿಲ್ಲ. ನೋಡಿ ಹೇಳಿ. ಜನಸಂಘದವರೂ ಸಹ ಇರಲಿಲ್ಲ.

Sri T. TARE GOWDA.—I am sorry I have not aid that there was Janasangha party and Communist partymen. ಶ್ರೇಣಿ ವರ್ಗಕ್ಕೆ ಸಂಬಂಧ ಪಟ್ಟವರು, ಮಹಿಳಾವರ್ಗದ ಪ್ರತಿನಿಧಿಗಳು, ಆಡಳಿತದಲ್ಲಿ ಅನುಭವ ಇರತಕ್ಕವರು ಹೀಗೆ ಎಲ್ಲರೂ ಜಾಯಿಂಟ್ ಸೆಲೆಕ್ಟ್ ಕಮಿಟಿಯಲ್ಲಿ ಸಭೆ ಸೇರಿ ದೀರ್ಘಕಾಲ ಚರ್ಚೆ ಮಾಡಿದರು. ಆ ಚರ್ಚೆ ಮಾಡುವ ಕಾಲದಲ್ಲಿ ಕೆಲವು ಅಭಿಪ್ರಾಯಗಳ ಮೇಲೆ ಮಾನ್ಯ ವಿರೋಧಪಕ್ಷದ ನಾಯಕರು ಟೀಕೆ ಮಾಡಿದರು. ವಿರೋಧಪಕ್ಷದ ಕೆಲವು ಸದಸ್ಯರೂ ಸಹ ಮೂಲಭೂತವಾದ ಕೆಲವು ಅಂಶಗಳ ವಿಚಾರವಾಗಿ ವಿರೋಧ ಮಾಡಿದರು. ಕೆಲವರು ಹಾಸ್ಯಾಸ್ಪದವಾದ ರೀತಿಯಲ್ಲಿಯೂ ಮಾತನಾಡಿದರು.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ನಿಜ.

ಶ್ರೀ ಟಿ. ತಾರೇಗೌಡ.—ಇಂತಹ ಪ್ರಾಮುಖ್ಯವಾದ ವಿಚಾರಗಳ ಮೇಲೆ ಸರ್ವಸಮರ್ಪಕ ವಾದ ರೀತಿಯಲ್ಲಿ ತೀರ್ಮಾನಕ್ಕೆ ಬರುವ ಕಾಲದಲ್ಲಿ ಈ ರೀತಿ ವಿವಿಧ ವರ್ಗಗಳ ಮತ್ತು ರಾಜ ಕೀಯ ಪಕ್ಷಗಳ ಪ್ರತಿನಿಧಿಗಳು ಇರತಕ್ಕಂಥ ಇಂತಹ ದೊಡ್ಡ ಸಮಿತಿಯಲ್ಲಿ ಮಾಡಿದಂಥ ಅಭಿಪ್ರಾಯಗಳ ಬಗ್ಗೆ ಜನತೆಯ ಹಿತದೃಷ್ಟಿಯಿಂದ ಕೆಲವು ಭಿನ್ನಾಭಿಪ್ರಾಯಗಳನ್ನು ವ್ಯಕ್ತ ಪಡಿಸುವುದು ಸಹಜ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ನಾನು ಹೇಳಿದ್ದು ಇಡೀ ರಾಷ್ಟ್ರದಲ್ಲಿ ಕಾಂಗ್ರೆಸ್ಸಿನವರು ರಾಜ್ಯಭಾರ ಮಾಡುತ್ತಿದ್ದಾರೆ. ಮೂಲಭೂತ ತತ್ವಗಳ ಬಗ್ಗೆ ಈ ಭೂಸುಧಾರಣೆಯ ವಿಚಾರ ದಲ್ಲಿ ಕೇಂದ್ರದಿಂದ ಪ್ರತಿಯೊಂದು ಪ್ರಾಂತ ಸರ್ಕಾರಕ್ಕೆ ಒಂದು ಆದೇಶ ಬಂದಿದೆ. ಆದರೆ ಮೂಲಭೂತ ತತ್ವಗಳ ವಿಷಯದಲ್ಲಿ ವಿರೋಧವಾಗಿ ವಾಕ್‌ಔಟ್ ಮಾಡಿದಂತಹ ಸನ್ನಿವೇಶ ಹಿಂದೂ ಸ್ಥಾನದ ಯಾವ ಸಂಸ್ಥಾನದಲ್ಲಿದೆ ಎಂಬುದಾಗಿ ನಾನು ಹೇಳಿದ್ದು. ನಾನು ಆ ರೀತಿ ಅಭಿಪ್ರಾಯ ಸೂಚಿಸುವುದಕ್ಕೆ ಯಾವ ಅಭ್ಯಂತರವೂ ಇಲ್ಲ. ಕೊನೆಯ ಸ್ಟೇಜಿನಲ್ಲಿ ಮೂಲಭೂತ ತತ್ವಗಳ ವಿಚಾರದಲ್ಲಿ ಸಹಾನುಭೂತಿ, ಸಮನ್ವಯ, ಒಪ್ಪಿಗೆ ಇಲ್ಲದೆ ಏನು ಟೀಕೆ ಮಾಡಿದ್ದರೂ ಅಭಿಪ್ರಾಯಗಳ ವಿಷಯದಲ್ಲಿ ಮಾತ್ರ ನಾನು ಅಡ್ಡಿ ಬರಲಿಲ್ಲ.

ಶ್ರೀ ಟಿ. ತಾರೇಗೌಡ.—ಸೆಲೆಕ್ಟ್ ಕಮಿಟಿ ಪ್ರೊಸೀಡಿಂಗ್ಸ್ ಕಾನ್‌ಫಿಡೆನ್ಷಿಯಲ್ ಎಂಬು ವುದು ಮಾನ್ಯ ವಿರೋಧಪಕ್ಷದ ನಾಯಕರಿಗೆ ಗೊತ್ತಿದೆ. ವಾಕ್-ಔಟ್ ಮಾಡಿದರು ಎಂದು ಹೇಳುವುದು ಸಹಜವೇ ಎಂಬುದನ್ನು ತಾವೇ ಯೋಚನೆ ಮಾಡಿ ಎಂಬುದಾಗಿ ನಾನು ಅವರಲ್ಲಿ ವಿನಯದಿಂದ ಕೇಳುತ್ತೇನೆ. ರಾಜಕೀಯ ಪಕ್ಷಗಳಲ್ಲಿ ಯಾವ ಒಂದು ಪಕ್ಷದ ನಾಯಕರು ಯಾವ ಸಂದರ್ಭದಲ್ಲಿಯೇ ಆಗಲೀ ಒಂದು ಅಭಿಪ್ರಾಯವನ್ನು ತಿಳಿಸಿದ ಮೇಲೆ ಆ ಪಕ್ಷದ ಇತರೇ ಸದಸ್ಯರು ಮಾನ್ಯತೆ ಕೊಡುವುದು ಒಂದು ಸ್ವಾಭಾವಿಕವಾದ ವಿಷಯ; ಒಂದು ಧರ್ಮ. ಅದಕ್ಕೊಂದು ಉದಾಹರಣೆಯನ್ನು ಸಹ ಕೊಡುತ್ತೇನೆ. ನೆನ್ನೆಯ ದಿನ ನನ್ನ ಮಾನ್ಯ ಸ್ನೇಹಿತರಾದ

ವಿರೋಧಪಕ್ಷದ ನಾಯಕರು ಶ್ರೀಮಾನ್ ಮಲ್ಲಾರಾಧ್ಯರು ಮಾತನಾಡುತ್ತಾ, ಈ ಭೂಸುಧಾರಣೆಯ ಬಗ್ಗೆ ಚರ್ಚೆ ಮಾಡಲು ಪ್ರತಿಯೊಬ್ಬ ಸದಸ್ಯರಿಗೆ ಕನಿಷ್ಟಪಕ್ಷ ಕಾಲಾವಕಾಶ 20 ನಿಮಿಷಗಳನ್ನಾದರೂ ನಿಗದಿ ಮಾಡಬೇಕೆಂದು ಹೇಳಿದಮೇಲೂ ಕೂಡ ಮಾಜಿ ವಿರೋಧಪಕ್ಷದ ನಾಯಕರಾಗಿದ್ದ ಶ್ರೀಮಾನ್ ಪುಟ್ಟರಾಮಯ್ಯನವರು ಅವರ ಪಕ್ಷದ ನಾಯಕರ ಅಭಿಪ್ರಾಯಕ್ಕೆ ವಿರೋಧವಾದ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಈ ರೀತಿ ಮಾಡಿದ್ದು ಸರಿಯೇ ಎಂದು ನಾನು ಕೇಳಬೇಕಾಗಿದೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ನಾನು ಹೇಳಿದ ಅಭಿಪ್ರಾಯಕ್ಕೆ ಶ್ರೀಮಾನ್ ಪುಟ್ಟರಾಮಯ್ಯನವರು ಮೂಲಭೂತವಾದ ತತ್ವಗಳ ವಿಚಾರದಲ್ಲಿ ವಿರೋಧವಾಗಿ ಹೇಳಿದ್ದೇನೋ ತಪ್ಪು. ನಾನು ಹೇಳಿದ ವಿಷಯದ ಮೇಲೆ ವ್ಯತಿರಿಕ್ತವಾಗಿ ಅವರು ಹೇಳಬಾರದಾಗಿತ್ತು.

ಶ್ರೀ ಎಂ. ರಾಮಪ್ಪ.—ಮಾನ್ಯ ಸದಸ್ಯರು ಭಾಷಣ ಮಾಡುವುದಕ್ಕೆ ಷುರುಮಾಡಿದ್ದಾರೆ. ಈ ರಿಪೋರ್ಟಿನ ಮೇಲೆ ಯಾವ ರೀತಿ ಮಾತನಾಡಬೇಕು ಎಂಬುದನ್ನು ಸ್ವಲ್ಪ ಗಮನಿಸಬೇಕು. ನಮ್ಮನೆ ಪ್ಲಾಟ್‌ಫಾರಂ ಮೇಲೆ ನಿಂತು ಭಾಷಣ ಮಾಡುವ ರೀತಿಯಲ್ಲಿ ಅವರು ಮಾತನಾಡುತ್ತಿದ್ದಾರೆ. ಅದರಲ್ಲಿ ಅರ್ಥವಿದೆಯೇ? ಅಧ್ಯಕ್ಷರು ಸ್ಕೋಪ್ ಆಫ್ ದಿ ಡಿಬೇಟ್ ನೋಡಿ ಸದಸ್ಯರಿಗೆ ಸರಿಯಾಗಿ ಡೈರೆಕ್ಷನ್ ಕೊಡಬೇಕು. ಈ ವರದಿಯಮೇಲೆ ಮಾತ್ರ ಮಾತನಾಡುವುದಕ್ಕೆ ಇಲ್ಲಿ ಅವಕಾಶ ಕೊಡಬೇಕು ಎಂದು ಒಂದು ತತ್ವವಿರುವಾಗ ಈ ರೀತಿ ಎಲೆಕ್ಷನ್ ಸ್ಪೀಚ್ ಮಾಡುವುದರಲ್ಲಿ ನಿಜವಾಗಿ ಅರ್ಥವಿದೆಯೇ!

11-30 A.M.

ಶ್ರೀ ಟಿ. ತಾರೇಗೌಡ.—ಮಾನ್ಯ ವಿರೋಧಪಕ್ಷದ ನಾಯಕರು......

ಶ್ರೀ ಎನ್. ಜಿ. ನರಸಿಂಹೇಗೌಡ (ಶ್ರವಣಬೆಳಗೊಳ).—ನಮ್ಮ ವಿರೋಧಪಕ್ಷದ ನಾಯಕರು ಅಪ್ಪಣೆ ಕೊಡಿಸಿದಂತೆ ಕಾಂಗ್ರೆಸ್ ಪಕ್ಷದವರು ಭೂಸುಧಾರಣೆಯ ಮೂಲ ತತ್ವಗಳನ್ನೇ ಧಿಕ್ಕರಿಸಿ ಸಭೆಯಿಂದ ವಾಕ್ಔಟ್ ಮಾಡಿದ್ದು ನಿಜವೇ ಅಲ್ಲವೇ ಎಂಬುದನ್ನು ಈಗ ಪ್ಲಾಟ್‌ಫಾರಂ ಭಾಷಣ ಮಾಡುತ್ತಿರುವ ಮಾನ್ಯ ಸದಸ್ಯರು ತಿಳಿಸಿ ಮುಂದೆ ಅವರ ಭಾಷಣ ಮಾಡಿದರೆ ಉತ್ತಮ. ಪ್ರಶ್ನೆಗೆ ಉತ್ತರ ಹೇಳದೆ ಮುಂದುವರಿದರೆ ಹೇಗೆ?

ಶ್ರೀ ಟಿ. ತಾರೇಗೌಡ.—ನಾನು ಹೇಳುವುದಿಷ್ಟೆ. ಈ ಮಸೂದೆಯನ್ನು ಆದಷ್ಟು ಜಾಗ್ರತೆ ಈ ಸಭೆಯ ಎಲ್ಲ ಸದಸ್ಯರೂ ಮಂಜೂರು ಮಾಡಿಸಿ ಇದರ ಅನುಕೂಲವನ್ನು ಎಂದರೆ ಉಳತಕ್ಕವನಿಗೇ ಜಮೀನು ಸಿಕ್ಕುವ ಹಾಗೆ ಮತ್ತು ನಿರುದ್ಯೋಗಿಯಾಗಿರತಕ್ಕವನಿಗೆ ಒಂದು ಖಾಯಂ ಉದ್ಯೋಗ ದೊರೆಯುವ ಹಾಗೆ ಮಾಡಬೇಕೆಂಬ ಉದ್ದೇಶ ಎಲ್ಲ ಪಕ್ಷಗಳಿಗೂ ಇರುವಂತೆ ನಮ್ಮ ಈ ಕಾಂಗ್ರೆಸ್ ಪಕ್ಷದ ಅಭಿಪ್ರಾಯವೂ ಕೂಡ ಅದೇ ಆಗಿರುತ್ತೆಂಬ ಅಂಶವನ್ನು ವಿರೋಧಪಕ್ಷದವರು ಅರಿತುಕೊಳ್ಳಬೇಕು. ಈ ಸಣ್ಣ ಪುಟ್ಟ ಟೀಕೆಗಳನ್ನೇ ಒಂದು ದೊಡ್ಡದನ್ನಾಗಿ ಮಾಡಿಕೊಂಡು ನಾಳೆ ಬರಲಿರುವ ಎಲೆಕ್ಷನ್‌ಗಳ ಕಾಲದಲ್ಲಿ ಈ ಟೀಕೆಗಳನ್ನೇ ಪ್ರದರ್ಶನ ಮಾಡಿಕೊಂಡು ವಿರೋಧಪಕ್ಷದವರು ಕಾಂಗ್ರೆಸ್ ಪಕ್ಷದವರಿಗಿಂತ ಭೂಹೀನರ ವಿಚಾರದಲ್ಲಿ ಹೆಚ್ಚಿನ ಆಸಕ್ತಿ ವಹಿಸಿದ್ದಾರೆಂಬುದನ್ನು......

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಈ ವಿಚಾರದಲ್ಲಿ ಯಾರೂ ಅನುಮಾನಪಡಬೇಕಾದ್ದೇ ಇಲ್ಲ.

ಶ್ರೀ ಟಿ. ತಾರೇಗೌಡ.—ಕಾಂಗ್ರೆಸ್ ಪಕ್ಷಕ್ಕೆ ಗೇಣಿದಾರರ ವಿಚಾರದಲ್ಲಿ ಯಾವತ್ತೂ ಅಭಿಮಾನವಿದ್ದೇ ಇದೆ. ಇತರ ಪಕ್ಷಗಳೂ ಇದಕ್ಕೆ ಸಹಕಾರ ನೀಡಿದರೆ ಅವರಿಗೆ ಈ ಅನುಕೂಲ ಬೇಗಲಭಿಸುತ್ತದೆ.

ಶ್ರೀ ಎಚ್. ಜಿ. ನರಸಿಂಹೇಗೌಡ.—ಈ ದಿವಸ ಕಾಂಗ್ರೆಸ್ ಪಕ್ಷದವರು ನಮಗೆ ಈ ವಿಚಾರದಲ್ಲಿ ಉಪದೇಶ ಮಾಡತಕ್ಕ ಅವಶ್ಯಕತೆಯೇನಿಲ್ಲ. ನಮ್ಮ ಪಕ್ಷದವರು ಈ ಭೂಸುಧಾರಣೆ ಶಾಸನವನ್ನು ಜಾರಿಗೆ ತರುವ ವಿಚಾರದಲ್ಲಿ ಯಾವ ಭಿನ್ನಾಭಿಪ್ರಾಯವಿಲ್ಲವೆಂದು ಎಲ್ಲರಿಗಿಂತಲೂ ಮೊದಲೇ ಇದನ್ನು ಅಡ್ವಾನ್ಸಾಗಿ ನಾವು ಅಂಗೀಕರಿಸಿದ್ದೇವೆ.

ಶ್ರೀ ಟಿ. ತಾರೇಗೌಡ.—ಮಾನ್ಯ ವಿರೋಧಪಕ್ಷದ ನಾಯಕರು ಈಗ ಸಭೆಯ ಮುಂದೆ ಈ ಭೂಸುಧಾರಣೆಯನ್ನು ಮಂಡಿಸಿದ ಮಾನ್ಯ ರೆವಿನ್ಯೂ ಮಂತ್ರಿಗಳನ್ನು ಭಗೀರಥನಿಗೆ ಹೋಲಿಸಿದ್ದಾರೆ. ಆ ಭಗೀರಥನು ಹೇಗೆ ಕಷ್ಟಪಟ್ಟು ತಪಸ್ಸು ಮಾಡಿ ಆಕಾಶದಿಂದ ಆ ದೇವಗಂಗೆಯನ್ನು ಭೂಲೋಕಕ್ಕೆ ತಂದನೋ ಹಾಗೇ ಈ ದಿವಸ ನಮ್ಮ ರೆವಿನ್ಯೂ ಮಂತ್ರಿಗಳು ಬಹಳ ಶ್ರಮಪಟ್ಟು ಈಗ ಈ ಭೂಸುಧಾರಣೆ ಮಸೂದೆಯನ್ನು ಈ ಸಭೆಯ ಮುಂದೆ ತಂದಿದ್ದಾರೆ. ಆದರೆ ಆ ದೇವಗಂಗೆಯನ್ನು ಭೂಲೋಕಕ್ಕೆ ಬರುವ ದಾರಿಯಲ್ಲೇ ಆ ಜಾನ್ಹವಿ ಋಷಿಗಳು ತಡೆದ ಹಾಗೆ ವಿರೋಧ ಪಕ್ಷದವರು ತಡೆಯದೆ ಈ ಭೂಸುಧಾರಣೆ ಬಿಲ್ಲನ್ನು ಪಾಸ್‌ಮಾಡಿಸಿ ಜಾಹ್ನವಿಯಾಗಿ ಹರಿಸು ಹೇಗೆ ಆ ಗಂಗಾಜಲದ ಸೌಕರ್ಯವನ್ನು ಆ ಜನರು ಪಡೆದರೋ ಹಾಗೇ ಈಗ ಈ ಭೂಸುಧಾರಣೆಯ ಬಿಲ್ಲಿನ ಫಲವನ್ನು ಉಳುವವನೇ ಹೊಲದ ಮಾಲೀಕನಾಗುವಂತೆ ಮತ್ತು ನಿರುದ್ಯೋಗಿಯಾಗಿರತಕ್ಕವನಿಗೆ ಒಂದು ಖಾಯಂ ಉದ್ಯೋಗ ಲಭಿಸುವಂತೆ ಮಾಡಿ ಹಾಗೂ ಈ ಸಂದರ್ಭದಲ್ಲಿ ಜಮೀನು ಕಳೆದುಕೊಳ್ಳತಕ್ಕವರಿಗೆ ಒಂದು ಸೂಕ್ತ ಪರಿಹಾರ ದೊರೆತು, ಎಲ್ಲರಲ್ಲೂ ಒಂದು ಸಮಾಧಾನಕರವಾದ ಪರಿಸ್ಥಿತಿ ಮಾಡುವಂತೆ ಮಾಡತಕ್ಕ ಹಾದಿಯಲ್ಲಿ ಅಡ್ಡಬರುವ ಅಡಚಣೆಗಳನ್ನು ತೊಡೆದು ಹಾಕಲು ನಮ್ಮ ಜಾಯಿಂಟ್ ಸಲೆಕ್ಟ್ ಸಮಿತಿಯವರು ಉತ್ತಮ ಸಲಹೆಗಳನ್ನು ನೀಡಿರುವುದರಿಂದ ನಾನು ಅವರ ಸಲಹೆಗಳನ್ನೆಲ್ಲ ಸಂಪೂರ್ಣವಾಗಿ ಅನುಮೋದಿಸುತ್ತೇನೆ. ಈ ವಿಚಾರದಲ್ಲಿ ಅಲ್ಲಲ್ಲೇ ಅಲ್ಪಸ್ವಲ್ಪ ಬದಲಾವಣೆಗಳಾಗಬೇಕಾಗಿರುವುದರಿಂದ ಆ ಬಗ್ಗೆ ನಮ್ಮ ಪಕ್ಷದವರು ಅಲಾಯಿದೆ ತಿದ್ದುಪಡಿಗಳನ್ನು ತರತಕ್ಕವರಾಗಿದ್ದೇವೆ. ಈ ಮಸೂದೆಯನ್ನು ಹೆಚ್ಚು ಟೀಕೆ ಮಾಡುವುದಕ್ಕೆ ಹೋಗದೆ ಈ ಸಭೆಯ ಮಾನ್ಯ ಸದಸ್ಯರೆಲ್ಲರೂ ಇದನ್ನು ಅಂಗೀಕರಿಸಿ ಜನರಿಗೆ ಅನುಕೂಲ ಕಲ್ಪಿಸಿಕೊಡಬೇಕೆಂದು ನಾನು ಈ ಸಭೆಯ ಸದಸ್ಯರಲ್ಲಿ ಬಿನ್ನವಿಸಿಕೊಳ್ಳುತ್ತೇನೆ.

ಈ ಹಿಂದೆ ಮಾನ್ಯ ವಿರೋಧಪಕ್ಷದ ನಾಯಕರು ಈ ಮಸೂದೆ ಜಾರಿಗೆ ಬಂದರೆ ಎಷ್ಟು ಜನ ಗೇಣಿದಾರರಿಗೆ ಖಚಿತವಾಗಿ ಜಮೀನು ಸಿಕ್ಕುತ್ತೆ. ಎಷ್ಟು ಜನ ನಿರುದ್ಯೋಗಿಗಳಿಗೆ ಉದ್ಯೋಗ ದೊರೆಯುತ್ತದೆ, ಹೆಚ್ಚು ಭೂಮಾಲೀಕರಿಂದ ಸರ್ಕಾರ ವಶಪಡಿಸಿಕೊಳ್ಳುವ ಒಟ್ಟು ಜಮೀನು ವಿಸ್ತರಣವೆಷ್ಟು ಎಂದಿತ್ಯಾದಿ ಅನೇಕ ಪ್ರಶ್ನೆಗಳನ್ನು ಕೇಳಿದ್ದರು ಅದಕ್ಕೆ ಉತ್ತರವಾಗಿ ಮಾನ್ಯ ರೆವಿನ್ಯೂ ಸಚಿವರು ಸೂಕ್ತವಾದ ಉತ್ತರಗಳನ್ನಿತ್ತಿದ್ದಾರೆ. ಈ ದಿವಸ ಗೇಣೀದಾರರಿಂದ ಸುಮಾರು 65 ಲಕ್ಷ ಎಕರೆಗಳಷ್ಟು ಭೂಮಿಯಲ್ಲಿ ವ್ಯವಸಾಯ ನಡೆಯುತ್ತಿದೆ. ಈ ಬಿಲ್ ಪಾಸಾದರೆ ಸುಮಾರು 25-30 ಲಕ್ಷ ಎಕರೆಗೆ ಗೇಣಿದಾರರು ಮಾಲೀಕರಾಗುತ್ತಾರೆ. ಅಂಥ ಒಂದು ಅವಕಾಶ ಈ ಬಿಲ್ಲಿನಲ್ಲಿದೆ. ನಮ್ಮ ಸರ್ಕಾರದವರು ಇಲ್ಲಿಯವರೆಗಾಗಲೇ ಸುಮಾರು 4-5 ಲಕ್ಷ ಎಕರೆ ಜಮೀನನ್ನು ಭೂಮಿಯಿಲ್ಲದ ವ್ಯವಸಾಯಗಾರರಿಗೆ ಹಂಚಿರುತ್ತಾರೆ.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ (ತಿಪಟೂರು).—ಹೌದೌದು. ಗುಡ್ಡಗಳ ತುದಿಯಲ್ಲಿ ಕೊಟ್ಟಿದ್ದಾರೆ. ಅಲ್ಲಿ ಗರಿಕೆ ಸಹ ಬೆಳೆಯುವುದಿಲ್ಲ !

ಶ್ರೀ ಟಿ. ತಾರೇಗೌಡ.—ಅವರಿಗೆಲ್ಲ ಒಳ್ಳೆಯ ಜಮೀನನ್ನೇ ಕೊಟ್ಟಿದ್ದಾರೆಂಬುದನ್ನು ನಾವೆಲ್ಲರೂ ನೋಡಿದ್ದೇವೆ. ಇಷ್ಟೇ ಅಲ್ಲದೆ ಅನೇಕ ಭೂರಹಿತ ಬೇಸಾಯಗಾರರಿಗೆ ವಿನೋಬಾಜಿಯವರ ಭೂದಾನಯಜ್ಞದ ಫಲವಾಗಿ ಬೇರೆ ಅನೇಕರಿಗೆ ಜಮೀನು ದೊರೆತಿರುತ್ತೆ. ಅದಕ್ಕಾಗಿ ವಿನೋಬಾಜಿಯವರಿಗೆ ನನ್ನ ವಂದನೆಗಳನ್ನರ್ಪಿಸುತ್ತೇನೆ. ಆದರೆ ವಿರೋಧಪಕ್ಷದ ಮಾನ್ಯ ನಾಯಕರಾದ ಶ್ರೀ ಜೆ. ಬಿ. ಮಲ್ಲಾರಾಧ್ಯರವರು ಈ ಹಂಚಿಕೆಯಲ್ಲಿ ಗೇಣಿದಾರರಿಗೆ

ಜಮೀನಿಲ್ಲದ ನಿರ್ಗತಿಕರಿಗೆ ಜಮೀನು ಸಿಕ್ಕುತ್ತಿಲ್ಲವೆಂದರು. ಆದರೆ ಈ ದಿವಸ ಭೂಮಾಲೀಕರಾಗಿರತಕ್ಕವರಿಗೇ ಮತ್ತಷ್ಟು ಭೂಮಿ ಒದಗಿಸಬೇಕೆಂಬ ಅಭಿಪ್ರಾಯ ಯಾವ ಪಾರ್ಟಿಯವರೆಗೂ ಇರುವುದಿಲ್ಲ. ಯಾರಿಗೆ ಜಮೀನಿಲ್ಲವೋ ಅಂಥವರಿಗೆ ಮಾತ್ರ ಜಮೀನನ್ನು ದೊರಕಿಸಿಕೊಡಲು ಎಲ್ಲ ಪಾರ್ಟಿಗಳೂ ಪ್ರಯತ್ನಪಡುತ್ತಿವೆ. ಈ ದಿವಸ ಜಮೀನಿರತಕ್ಕವರು ತಾವಾಗಿಯೇ ಜಮೀನಿಲ್ಲದವರಿಗೇ ಜಮೀನನ್ನು ಬಿಟ್ಟುಕೊಡತಕ್ಕಂಥ ಒಂದು ಮನೋಭಾವ ಉದಯಿಸುವಂತೆ ಮಾಡಲು ವಿನೋಬಾಜಿಯವರ ಶ್ರಮವು ಹೆಚ್ಚುಫಲಕಾರಿಯಾಗಿದೆ. ಈ ಮನೋಭಾವನೆಯ ಪರಿವರ್ತನೆಯಿಂದ ಭೂರಹಿತರ ಬಾಳು ಉತ್ತಮವಾಗುತ್ತದೆ.

ಸ್ವಾಮಿ, ಈ ದಿವಸ ನಾವು ಜಾರಿಗೆ ತರಬೇಕೆಂದು ಹೊರಟಿರತಕ್ಕ ಈ ಭೂಸುಧಾರಣೆಯ ಫಲವಾಗಿ ಯಾರ್ಯಾರಿಗೆ ಜಮೀನಿಲ್ಲವೋ ಅಂಥ ಪ್ರತಿಯೊಬ್ಬ ಭೂರಹಿತ ಬೇಸಾಯಗಾರನಿಗೂ ಭೂಮಿಯನ್ನೊದಗಿಸಿ ಅವರೆಲ್ಲರಿಗೂ ಒಂದು ಜೀವನದ ಹಾದಿಯನ್ನು ಉಂಟುಮಾಡಿಕೊಡಬೇಕೆಂದರೆ ಅದು ಖಂಡಿತ ಸಾಧ್ಯವಿಲ್ಲ. ಮೇಲಾಗಿ ಈ ದಿವಸ ಪ್ರತಿಯೊಬ್ಬರೂ ಈ ವ್ಯವಸಾಯೋದ್ಯಮವು ಒಂದು ಲಾಭದಾಯಕವಾದ ಉದ್ಯಮವಲ್ಲವೆಂಬುದನ್ನು ಒಪ್ಪಿಕೊಂಡಿದ್ದಾರೆ. ಹೀಗಿರುವಾಗ ಈ ದಿವಸ ಭೂರಹಿತರಾಗಿರತಕ್ಕವರೆಲ್ಲ ಈ ವ್ಯವಸಾಯೋದ್ಯಮವನ್ನೇ ಅವಲಂಬಿಸಲು ಹೊರಟಿರುತ್ತಾರೆಂತ ಭಾವಿಸುವುದು ಒಂದು ಹಾಸ್ಯಾಸ್ಪದವೇ ಸರಿ. ಈ ದಿವಸ ಭೂರಹಿತರಾದ ಅನೇಕರು ಸಣ್ಣ-ಪುಟ್ಟ ಕೈಗಾರಿಕೆಗಳಲ್ಲಿ ತೊಡಗಿದ್ದಾರೆ. ಸರ್ಕಾರಿ ನೌಕರಿಗಳಲ್ಲಿದ್ದಾರೆ. ದೊಡ್ಡ ದೊಡ್ಡ ಕಾರ್ಖಾನೆಗಳಲ್ಲಿ ಸೇರಿದ್ದಾರೆ. ಕೆಲವರು ಗೇಣಿದಾರರಾಗೂ ಇದ್ದಾರೆ. ಹೀಗೆ ನಾನಾ ಮಾರ್ಗಗಳಲ್ಲಿ ಜನರು ಜೀವನ ನಡೆಸುತ್ತಿದ್ದಾರೆಂಬುದನ್ನು ನಾವೆಲ್ಲರೂ ನೋಡುತ್ತಿದ್ದೇವೆ. ಇತ್ತೀಚೆಗೆ ಸರ್ಕಾರದವರು ಬೇರೆ ನಿರುದ್ಯೋಗ ಸಮಸ್ಯೆಯ ನಿವಾರಣೆಯ ಬಗ್ಗೆ ಪಂಚವಾರ್ಷಿಕ ಯೋಜನೆಗಳನ್ನು ಬೇರೆ ಪ್ರಾರಂಭ ಮಾಡಿದ್ದಾರೆ. ಇದರ ಅಂಗವಾಗಿ ಅನೇಕ ಹೊಸ ಹೊಸ ಕೈಗಾರಿಕೆಗಳನ್ನು ಪ್ರಾರಂಭಿಸಿದ್ದಾರೆ. ಇವುಗಳ ಫಲವಾಗಿ ಅನೇಕ ನಿರುದ್ಯೋಗಗಳಿಗೆ ಉದ್ಯೋಗ ದೊರೆತು ಅವರು ಸುಖವಾಗಿ ಜೀವನ ಮಾಡುತ್ತಿದ್ದಾರೆ. ಹೀಗೆ ನಿರುದ್ಯೋಗಿಗಳ ಸಮಸ್ಯೆಯನ್ನೇ ಬಗೆಹರಿಸಲು ಹೊರಟಿರತಕ್ಕ ಸರ್ಕಾರ ಭೂರಹಿತ ಜನರನ್ನು ಹಾಗೆ ಕೈಬಿಡುತ್ತಾರೆಂತ ಯಾರೂ ಭಾವಿಸಬಾರದು. ಈ ಅನುಕೂಲಗಳನ್ನೆಲ್ಲಾ ಈಗಾಲೇ ಮಾನ್ಯ ರೆವಿನ್ಯೂ ಮಂತ್ರಿಗಳು ಹೇಳಿರತಕ್ಕ ರೀತಿಯಲ್ಲಿ ನಾವು ಸದುಪಯೋಗಪಡಿಸಿಕೊಳ್ಳಬೇಕಾಗಿದೆ.

ಇನ್ನು ಕಾಂಪೆನ್ಸೇಷನ್ ವಿಚಾರದಲ್ಲಿ ಸಣ್ಣ ಭೂಹಿಡುವಳಿದಾರರಿಗೆ ಅನುಕೂಲವಾಗುವಂತೆ ಏರ್ಪಾಡು ಮಾಡಿದ್ದಾರೆ.

ಇನ್ನು ರಿಲಿಜಿಯಸ್ ಮತ್ತು ಚಾರಿಟಿ ಬಲ್ ಎಂಡೋಮೆಂಟುಗಳ ವಿಚಾರದಲ್ಲಿ ಎರಡು ಮಾತುಗಳನ್ನಾಡಬೇಕಾಗಿದೆ. ಈ ಸಂಸ್ಥೆಗಳ ವಿಚಾರದಲ್ಲಿ ಸರ್ಕಾರದವರು ಬಹಳ ಉದಾರ ರೀತಿಯಿಂದ ವರ್ತಿಸಬೇಕೆಂದು ವಿರೋಧಪಕ್ಷದ ನಾಯಕರಾದ ಶ್ರೀ ಮಲ್ಲಾರಾಧ್ಯರು ಹೇಳುತ್ತ ಈ ವಿಚಾರದಲ್ಲಿ ಪ್ಲಾನಿಂಗ್ ಕಮೀಷನ್ನಿನವರ ಅಭಿಪ್ರಾಯ ಹಾಗೂ ನಮ್ಮ ಕಾನ್‌ಸ್ಟಿಟ್ಯೂಷನ್ನಲ್ಲಿರುವ ಪ್ರಕಾರ ಇದಕ್ಕೆ ಯಾವ ವಿರೋಧವೂ ಇರುವುದಿಲ್ಲ ಎಂಬುದಾಗಿ ಹೇಳಿದ್ದಾರೆ. ನನಗೂ ಸಹ ಈ ಧರ್ಮ ಸಂಸ್ಥೆಗಳ ಹಾಗೂ ಮತಗಳು ಮತ್ತು ಗುರುಗಳ ವಿಚಾರದಲ್ಲಿ ತುಂಬಾ ಭಕ್ತಿ ಇವೆ. ನಮ್ಮ ಹಿಂದೂ ಧರ್ಮ ಬೆಳಗಬೇಕೆಂದು ಹೇಳತಕ್ಕವರ ಪೈಕಿ ನಾನೂ ಒಬ್ಬ. ಆದರೆ ಈ ಸಂಸ್ಥೆಗಳೆಲ್ಲವೂ ''ಸರ್ವೇಜನಾ ಸುಖಿನೋ ಭವಂತು'' ಎಂಬ ರೀತಿ ನಡೆದುಕೊಳ್ಳಬೇಕು. ಆದರೆ ಈ ದಿವಸ ಈ ಮತ-ಧರ್ಮಸಂಸ್ಥೆಗಳ ವಿದ್ಯಮಾನವೇನಾಗಿದೆ, ಅವುಗಳು ತಮ್ಮ ಧರ್ಮಸೂತ್ರವನ್ನು ಸರಿಯಾಗಿ ಪಾಲಿಸುತ್ತಿವೆಯೇ ಎಂಬುದನ್ನು ನಾವು ಸ್ವಲ್ಪ ಅರ್ಥಮಾಡಿಕೊಳ್ಳಬೇಕಾಗಿವೆ. ಧರ್ಮ ಸಂಸ್ಥೆಗಳಿಗಿರುವ ಜಮೀನನ್ನು ಗೇಣಿದಾರರು ಮತ್ತು ಜಮೀನಿಲ್ಲದಿರುವ ರೈತರು ಈಗ ಕೊಡುತ್ತಿದ್ದಾರೆಂದು ಮಾನ್ಯ ಸಚಿವರು ಹೇಳಿದರು ಅಂಥ ಸಂಸ್ಥೆಗಳವರು ತಮಗೆ ಜಮೀನಿನಿಂದ ಬರುವ ಆದಾಯದಿಂದ ಗೇಣಿದಾರರ ಮಕ್ಕಳ ಜ್ಞಾನಾರ್ಜನೆಗೆ ಅನುಕೂಲ

(ಶ್ರೀ ಟಿ. ತಾರೇಗೌಡ)

ವಾಗುವಂತೆ ಸೌಲಭ್ಯ ಕಲ್ಪಿಸಿದ್ದಾರೆ ಎಂದು ನೋಡಬೇಕು ಏಕೆಂದರೆ "ನಹಿ ಜ್ಞಾನೇನ ಸದೃಶಂ" ಈ ಜ್ಞಾನಾರ್ಜನೆಗೆ ಅವಕಾಶ ಅನುಕೂಲಗಳು ಸೌಕರ್ಯಗಳ ಸೌಲಭ್ಯಗಳು ಎಲ್ಲಾ ವರ್ಗದ ಮಕ್ಕಳು ಒದಗಿಸಬೇಕು. ತಿರುಪತಿ ವೆಂಕಟೇಶ್ವರದೇವಾಲಯದ ಆಡಳಿತಕ್ಕೆ ಸಂಬಂಧಪಟ್ಟವರು ವಿದ್ಯಾಸಂಸ್ಥೆಗಳು, ಸಾರ್ವಜನಿಕ ಹಾಸ್ಟಲ್‌ಗಳು, ಕ್ರಾಫ್ಟ್ ಇನ್‌ಸ್ಟಿಟ್ಯೂಷನ್ಸ್ ವಗೈರೆ ತೆರೆದು ಜನರಿಗೆ ಸಹಾಯ ನೀಡುತ್ತಿದ್ದಾರೆ. ಯಾರುಜಮೀನನ್ನು ಉಳುಮೆ ಮಾಡುತ್ತಾರೋ ಅಂಥವರ ಮಕ್ಕಳ ಜ್ಞಾನಾರ್ಜನೆಗೆ ಅವಕಾಶವಾಗುವ ಹಾಗೆ, ಅವರ ಜೀವನಕ್ಕೆ ಅನುಕೂಲವಾಗುವ ಹಾಗೆ ಯಾರು ಸೌಲಭ್ಯಗಳನ್ನು ಕಲ್ಪಿಸಿಕೊಡುತ್ತಾರೋ ಅಂಥವರಲ್ಲಿರುವ ಜಮೀನುಗಳನ್ನು ಈ ಕೆಲವು ಷರತ್ತುಗಳನ್ನು ಹಾಕಿ ಸಂಸ್ಥೆಗಳಿಗೇ ಬಿಟ್ಟು ಅವುಗಳಿಗೆ ಒಂದು ರಿಯಾಯಿತಿ ತೋರಿಸಿದರೆ ಭಾಗವೇನೂ ಇಲ್ಲ. ಎಂದು ತಿಳಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

†Sri K. P. KARUMBAYYA (Virajpet).—This Bill fulfils the long-felt desire of the country in the field of agrarian economy and if the recommendations are implemented, it will grant ownership of land to a considerable section of the actual tillers of the soil. To quote the figures of the Hon'ble Minister for Revenue, about 25 lakhs acres are going to be in the absolute ownership of the future agriculturists of the country. Again, there will be about 2 lakhs of acres of surplus lands available for distribution. It also in a way brings about the consummation of socialistic pattern of society or socialism which is espoused by thepeople in the country today. While it tries to decrease landholdings of thepeople, it in a way increases also the economic lot of average agriculturist in the country. I therefore feel Sir that the Bill as a whole augurs well for the future of the rural economy. I must however emphatically state that I cannot see eye to eye with most of the recommendations made by the Joint Select Committee, particularly in matters such as ceiling on land, even the extent of basic holding, rent fixed on rainfed land particularly in Malnad area, compensation to be paid to landlords on non-resumable land in the case of rain-fed land and even fixing of the 4th class lands, fixation of dry land to facilitate securing green manure, grazing facilities, etc., exemptions of plantations in the case of future acquisitions and last by no means the least prohibiting people from leasing out lands.

Sir, with regard to the ceiling fixed on land, that so far as the directions of planning Commission are concerned, it is admitted they have recommended three family holdings and that works out to 18 standard acres. So also, if a meticulous observation is made into the recommendations of the Select Committee, so far as the general tenor of the recommendations particularly with regard to resumable land is concerned, it is only about 3 family holdings. That also comes to only about 18 acres. I therefore feel that 27 standard acres fixed as ceiling on land is too excessive and that has got to be revised. Applying the test to my own land, whether the Hon'ble Chief Minister who is present remembers or not, when he visited as Chairman of the Land Reforms

Committee of our State, we urged on him that the fixation of ceiling at 30 acres in my District would be a very fair fixation. But according to the recommendations of the Select Committee if 27 standard acres is the ceiling laid down, that would work out in the case of 4th class land to 54 acres. If therefore a person is allowed for personal cultivation at the rate of 54 acres, I am afraid, there would not be any surplus land available in my District. The objective or the purpose of this Land Reform Bill would be frustrated. I am therefore suggesting that in consonance with the directions of the Planning Commission and in consonance with the general tenor of recommendations of the Joint Select Committee Report, which proposes to have for personal cultivation about 3 family holdings, it should be brought down to from 27 acres to 18 standard acres, in which case our own District would have the perfect satisfaction of having 36 acres. I may say, Sir, that in my own place, a person owning 1,000 padas is said to be a fairly big landlord. He is in a position to get his lands comfortably cultivated and his family and everbody can comfortably settle in life. If there, the ceiling is reduced from 27 acres to 18 acres, that would work out to 36 acres of land in my district, and I am sure, not only in District but all over Malnad area, everybody would have the satisfaction of having a fairly high acreage of land for personal cultivation.

Then Sir, while I object to the fixation of ceiling at 27 acres I must also say that in keeping with the socialistic pattern of society, so far as the basic holding is concerned which is fixed at 2 acres, it is too small and it is too uneconomic. In my opinion, it must be raised at least from 2½ acres to 3 acres. Though the enhanced area may be ½ or one acre, it makes a world of difference so far as the applicability to Malnad areas is concerned. For a person, husband and wife, to keep themselves busy engaged throughout the year to see that whatever income they derived from that area of the land they cultivate is sufficient enough to keep their heart and soul together, not less than five to six acres would be the irreducible minimum. If therefore, an acreage of 2 acres is fixed up and if everybody that is owning less than 2 acres is called a small holder, I am afraid the purpose will not be served in ameliorating the average lot of an average agriculturist. Any grant therefore of the surplus land available and any direction or any law that has to be passed so far as non-resumable land is concerned, must be restricted to more than 2½ to 3 standard acres in which case a family of three will be able to lead a life at least satisfying both their heart and soul.

When Sir, with regard to the fixation of rent, I must say that the disparity in the rates fixed at one-fourth in the case of land with assured supply of water and one-fifth in the case of other lands must be revised for the following reasons. In my own district of Coorg, I must concede that from time immemorial having regard to the fertility of the soil and having regard to the intensive cultivation of the land,

(Sri K. P. KARUMBAYYA)

people used to raise a fairly high percentage of crop and one-third of the gross income would be treated as cost of the cultivation expenses and the remaining two thirds used to be divided between the landlord and the tenant and the relationship between the landlord and tenant used to be very happy. But the very moment they came to know of the introduction of a Bill like this, the relationship has become very bad. The landlords themselves have resumed the land for themselves and the tenants have been left in the streets and they are very much unemployed.

Now therefore to seek fixation of rent at one-fifth would be doing a collossal injustice by the side of landed people. If one-third is not possible, at least it must be fixed at one-fourth. That would make the future people who by force of circumstances have to get their lands cultivated by other persons, to earn sufficient enough to eke out their livelihood. Under these circumstances, it must be borne in mind that after all in the Malnad areas where the lands depend upon only rains and in the case of rain fed crops, they are able to raise only one crop per year. Assuming that a man having 15 acres of wet land is a man fairly above the middle class, above the average class, with the fixation of rent at one-fifth he will not be able to get anything sufficient enough to make his heart and soul together. The averge production of paddy in the Coorg District is 52 per cent and if one-fifth is fixed as rent, that would work out in our parts, at 10-10½ batties of paddy per acre and three cart-loads of paddy, fetching a total revenue of Rs. 800 per year will not be sufficient enough for their livelihood in the case of future land lords who by force of circumstances, either a widow or a minor or a widow having three children below 18 years, getting Rs. 800 per year with such an extensive area of 15 acres, that would reduce the standard of living to worse than that of IV class officer in the State. In these circumstances, I urge that one-fifth in the Malnad areas in case of lands where there is not sufficient supply of water must be raised to one-fourth and by so doing, justice will be done by the side of the people in Malnad and in addition, the disparity between the rentals in the case of lands having assured supply of water and rain fed lands, to a very great extent is eliminated also. When I say that the rent must be raised from one-fifth to one-fourth, I must be equally emphatic in saying that so far as the payment of compensation to the landlords who lease their lands because they are not in a position to resume, is concerned it must also be raised to 15 times of one-fourth the gross income of the land. In the case of irrigated land, they are given compensation of 15 times of one-fourth the gross income, but in the case of lands which are not commanding an assured supply of water, they are having only 15 times of one-fifth the gross income. Even in the payment of compensation so far as these land lords who are going to be deprived of resumable land are concerned, it must be fixed at fifteen times...........

Sri B. D. JATTI.—Are you going to suggest uniform compensation to all the people or are you going to make a classification, say, those persons whose basic holding is below 20 acres; they should get 15 per cent?

Sri K. P. KARUMBAYYA.—So far as the lands below the basic holdings are concerned, that is, small holders, I will be very happy if there is a slab system even if they are paid twenty times of one-fourth the gross income; but in the case of higher area of land, I have no objection if it is done ten times.

Sri C. K. RAJAIAH SHETTY.—While you sell the land to other man, can there be a disparity in the rates between one man and the other man?

Sri B. D. JATTI.—Under the Constitution, there is no difficulty. It is not unconstitutional; it is not illegal.

Sri K. P. KARUMBAYYA.—So far as ther ecommendations regarding the exemption of plantation are concerned, I welcome them. In the matter of employment potential, foreign exchange power and the enhancment of the wealth, plantations are doing a lot and therefore, to fix an extent of plantations would certainly very much jeopardise the interests of the State as a whole. So I welcome the exemptions of plantations.

So far as the ceiling limit is concerned, I am afraid that in the case of exemptions of plantations and the future acquisition, there is one word which creates a certain amount offear so far as possession intact is concerned, that means as it is, if there is going to be any change so far as the extent of the area they own is concerned, so far as the future generation is concerned or at least so far as theirs successors or heirs are concerned it is going to make some change. At any rate, that is the implication of the word 'intact' under section 64 and that is a matter which the Government has got to clarify so that they may rest assured so far as the intensive cultivation of plantation and their efforts to produce the maximum production are concerned.

Lastly, in regard to clause 5 mentioning all those who are prohibited from leasing the land, there is one prohibition so far as widows and unmarried girls are concerned. I submit that we have got to be very generous so far as the widow and minor children are concerned. It is unthinkable to expect a widow or minor children to go to fields and get their lands personally cultivated. In such cases, tenancy has got to be creted and certainly they must have the privillege of getting the lands cultivated through tenants. What is applicable to widows and minor children must also be applied to unmarried girls and they must also have the same facility to lease their lands to get them cultivated as in the case of disabled persons.

With these few observations, I certainly welcome the Bill as a whole and its immediate implemmentation and coming into law at once. While making these few alterations inserted as they are quite necessary so far as the smooth and happy working of the measure of land reforms is concerned..............

Sri B. D. JATTI.—Regarding religious and charitable, institutions, you have not expressed an opinion.

Sri K. P. KARUMBAYYA.—Regarding Religious and Charitable Institutions, I would certainly appreciate the move so far as the exemptions in the case of institutions which have undertaken imparting of education are concerned. I would certainly very much urge that such of those institutions as have been undertaking the imparting of education, either technical or humane, must be exempted so far as the operation of this Act is concerned.

I am very much thankful to the Chair for having allowed me to speak on this measure.

12-00 NOON

ಶ್ರೀ ಎಸ್. ಸುಬ್ಬಯ್ಯನಾಯಕ್ (ಪುತ್ತೂರು).—ಮಾನ್ಯ ಅಧ್ಯಕ್ಷರೆ, ನಮ್ಮ ಮುಂದಿರುವ ಈ ಮೈಸೂರು ರಾಜ್ಯದ ಭೂಸುಧಾರಣಾ ವಿಧೇಯಕದ ಮೇಲಿನ ಸಂಯುಕ್ತ ಸಮಿತಿಯ ವರದಿಯನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಆದರೆ ನೂರಾರು ವರ್ಷಗಳಿಂದ, ತಾತ ಮುತ್ತಾತಂದಿರ ಕಾಲದಿಂದ ಗೇಣಿದಾರರಾಗಿದ್ದು ಉಳುಮೆ ಮಾಡುತ್ತಿದ್ದ ಜನರಿಗೆ ಈ ಒಂದು ಸ್ಥಾನದಿಂದ ತಪ್ಪಿಸಿ ಒಂದು ಜವಾಬ್ದಾರಿ ಸ್ಥಾನ ಕೊಡುವುದೇ ಈ ವಿಧೇಯಕದ ಸಾರಾಂಶವೆಂದು ನಾನು ತಿಳಿದುಕೊಂಡಿದ್ದೇನೆ. ಹಿಂದೆ ಮಾತನಾಡಿದ ಸಹೋದರಿಯೊಬ್ಬರು 'ಉಳುವವನಿಗೇ ಹೊಲ' ಎಂದಾಗಬಾರದು, ಹೀಗಾದರೆ 'ಅಡಿಗೆ ಮಾಡುವವಳಿಗೇ ಊಟ' ಎಂದಾಗುತ್ತದೆಂದು ಹೇಳಿದರು. ಇದು ವಿಚಿತ್ರ ರೀತಿಯ ವಾದ ನಾವು ಹೇಳುವುದು ಉಳುವವನಿಗೂ ಹೊಲ ಕೊಡಿ, ಅಡಿಗೆ ಮಾಡುವವಳಿಗೂ ಊಟ ಕೊಡಿ ಎಂದೇ ಹೊರತು ಉಳುವವನಿಗೇ ಎಂದಲ್ಲ. ಉಳುವವನು 24 ಗಂಟೆಯೂ ಉಳುಮೆ ಅಥವ ಆ ಸಂಬಂಧವಾದ ಕೆಲಸ ಮಾಡುತ್ತಿದ್ದು ಅವನಿಗೆ ಆ ಹೊಲದಲ್ಲಿ ಸಿಕ್ಕುವ ಹೆಚ್ಚಿನ ಉತ್ಪತ್ತಿಯೂ ಸಿಕ್ಕದೇಯಿರುವುದರಿಂದ, ಅವನಿಗೂ ಅದರ ಫಲವನ್ನು ಹೊಣಗಾರಿಕೆಯನ್ನು ಸ್ವಲ್ಪ ಮಟ್ಟಿಗೆ ಕೊಡಿ ಎಂದು ನಾವು ಹೇಳುವುದು. ಅವನಿಗೇ ಕೊಡಿ ಎಂದು ಹೇಳುವುದಿಲ್ಲ. ಉಳುವವನಿಗೆ ಮತ್ತು ಉಳುಸುವವನಿಗೆ ಇಬ್ಬರಿಗೂ ಇರಲಿ, ಹಾಗಾದರೆ ನಮ್ಮ ಸಮಾಜದ ಅಭಿವೃದ್ಧಿಗೆ, ಪ್ರಗತಿಗೆ ಸಾಧನವಾಗುತ್ತದೆಂದು ಹೇಳುತ್ತೇನೆ.

ಈ ವಿಧೇಯಕದ ಸಂಬಂಧವಾಗಿ ಕೆಲವು ಸೂಚನೆಗಳನ್ನು ಮಾಡಬೇಕೆಂದಿಚ್ಛಿಸುತ್ತೇನೆ. 'ರಕ್ಷಿಸಲ್ಪಟ್ಟ ಗೇಣಿದಾರ' ಎಂದರೆ ಗೊತ್ತಾದ ದಿನಕ್ಕೆ ಹಿಂದೆ ಹನ್ನೆರಡು ವರ್ಷದಿಂದ ಜಮೀನಿನ ಒಕ್ಕಲುತನ ಸ್ವಂತವಾಗಿ ನಡೆಸಿಕೊಂಡು ಬಂದಿರಬೇಕೆಂದಿದೆ. ನನ್ನ ಅಭಿಪ್ರಾಯದಲ್ಲಿ ಇದು ಹೆಚ್ಚಾಯಿತು. ಆರು ವರ್ಷದಿಂದ ಯಾರು ಒಂದೇ ಸಮನಾಗಿ ಆ ಜಮೀನನ್ನು ಒಕ್ಕಲುತನ ಮಾಡಿಕೊಂಡು ಬಂದಿದ್ದನೋ ಅವನು 'ರಕ್ಷಿಸಲ್ಪಟ್ಟ ಗೇಣಿದಾರ' ನೆಂದು ಭಾವಿಸಬೇಕು. ಇದಕ್ಕೆ 1-11-1956ನೆಯ ದಿನವನ್ನು ಮೂಲ ತಾರೀಕಾಗಿ ಇಟ್ಟುಕೊಳ್ಳಬಹುದೆಂದು ಸೂಚಿಸುತ್ತೇನೆ. ಈ ವಿಧೇಯಕದ ಮುಖ್ಯ ಸಾರಾಂಶವೇನೆಂದರೆ, ಆದಷ್ಟು ಹೆಚ್ಚು ಮಂದಿಗೆ ಸ್ವಂತ ಜಮೀನನ್ನೊದಗಿಸಬೇಕೆಂಬುದು ಈ ಉದ್ದೇಶ ನೆರವೇರಲು ಏನೇನು ಮಾಡಬೇಕೋ ಅದನ್ನು ಆದಷ್ಟು ಮಟ್ಟಿಗೂ ಮಾಡಲು ಪ್ರಯತ್ನ ಮಾಡಿದ್ದಾರೆ. ಮೇಲಿನ ತಿದ್ದುಪಡಿಯಿಂದ ಇನ್ನೂ ಹೆಚ್ಚು ಪರಿಪೂರ್ಣತೆಯನ್ನು ಮಾಡಬಹುದೆಂದು ನನ್ನ ಅಭಿಪ್ರಾಯ.

ಮೈನರುಗಳೂ, ಶಾರೀರಕ ಮತ್ತು ಮಾನಸಿಕ ದೌರ್ಬಲ್ಯ ಉಳ್ಳವರೂ ಗೇಣಿದಾರರನ್ನು ಮುಂದುವರಿಸಬಹುದೆಂದು ಮಾಡಿದ್ದಾರೆ. ಈ ವಿಷಯದಲ್ಲಿ ನಾನು ಹೇಳುವುದೇನೆಂದರೆ, ಇವರಿಗೂ ಸಹ ಒಂದು ಮಿತಿ ಇರಬೇಕೆಂದು. ಪರಮಾವಧಿ ಮಿತಿಯಲ್ಲೇನೋ ಇವರೂ ಬರುತ್ತಾರೆ. ಸೈನ್ಯಕ್ಕೆ ಸೇರಿ ಗೈರು ಹಾಜರಾಗಿರುವವರು ಮೈನರರು ಶಾರೀರಕ ಮತ್ತು ಮಾನಸಿಕ ದೌರ್ಬಲ್ಯ

ವುಳ್ಳವರಿಗೆ ಸುಮಾರು 15-20 ವರ್ಷಗಳವರೆಗೆ ಈ ಹಕ್ಕನ್ನು ಉಪಯೋಗಿಸಬಹುದು. ಇದು ಹೆಚ್ಚಾಯಿತು. ಇಂಥವರಿಗೂ ಪರಮಾವಧಿಯನ್ನು ಅನ್ವಯಿಸುವುದು ಒಳ್ಳೆಯದಲ್ಲ. ಇಂಥವರಿಗೆ ಸುಮಾರು ಒಂದು ಕುಟುಂಬ ಹಿಡುವಳಿಗಿಂತ ಹೆಚ್ಚಾಗಿರಬಾರದು. ಮೊದಲನೆಯ ದರ್ಜೆಯ ಆರು ಎಕರೆಯಾದರೆ ಏಳನೆಯ ದರ್ಜೆಯ ಭೂಮಿ 48 ಎಕರೆಯಾಗುತ್ತದೆ. ಹೀಗೆ ಮಿತಿಗೊಳಿಸಿದರೆ ಹೆಚ್ಚು ಜನರಿಗೆ ಜಮೀನನ್ನು ಕೊಡಲು ಸಾಧ್ಯವಾಗುತ್ತದೆ, ಅನುಕೂಲವಾಗುತ್ತದೆ. ಮೈನರಿನವರಿಗೆ 18 ವರ್ಷ ತುಂಬುವವರೆಗೆ ಆ ಭೂಮಿಯನ್ನು ಬೇರೆಯವರಿಗೇ ಹಂಚುವುದಕ್ಕಾಗುವುದಿಲ್ಲ; ಆದುದರಿಂದ ಪರಿಮಿತಿಯನ್ನು ಕಡಮೆ ಮಾಡುವುದು ಸಾಧ್ಯವಾಗಿದೆ. ಅಂತ ಶಾರೀರಕ, ಮಾನಸಿಕ ದೌರ್ಬಲ್ಯ ಹೊಂದಿರುವವರು ಮೈನರರು, ಮಿಲಿಟರಿಯವರು ಇವರಿಗೆ ಒಂದು ಕುಟುಂಬ ಹಿಡುವಳಿಗಿಂತ ಜಾಸ್ತಿ ಕೊಡಬಾರದೆಂದು ಹೇಳುತ್ತೇನೆ.

ಇನ್ನು ಗೇಣಿದಾರರ ಬಗ್ಗೆ ಏಳನೆಯ ಖಂಡದಲ್ಲಿ ಹೇಳಿದೆ. ಬೇರೆ ಬೇರೆ ಪ್ರದೇಶದಲ್ಲಿ ಬೇರೆ ಬೇರೆ ತಾರೀಕುಗಳನ್ನು ನಿಗದಿಮಾಡಿ ಕ್ರಮಗಳನ್ನು ಕೈಕೊಳ್ಳಬೇಕೆಂದು ಸೂಚನೆ ಮಾಡಿದ್ದಾರೆ. ಈ ರೀತಿ ಮಾಡುವುದು ಒಳ್ಳೆಯದಲ್ಲವೆಂದು ಹೇಳುತ್ತೇನೆ. ಏಕೆಂದರೆ, ಹಾಗೆ ಮಾಡಿದರೆ ಸರಿಯಾಗಿರುವುದಿಲ್ಲ. ನಾವು ಒಂದೇ ರಾಜ್ಯದಲ್ಲಿ ಸೇರಿದ್ದೇವೆ, ಆದರೂ ಬೇರೆಬೇರೆ ನಿಯಮಗಳಿವೆ ಎನ್ನುವ ಕಲ್ಪನೆ ಬರುತ್ತದೆ. ಇದು ಬರಬಾರದು. ಇಂಥಾದ್ದನ್ನು ದೂರ ಬಿಟ್ಟು ಆದಷ್ಟು ಸಂಯುಕ್ತವಾಗಿರುವಂತೆ ಒಂದುಗೂಡಿಸುವುದೊಳ್ಳೆಯದು. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1954ನೆಯ ಇಸವಿ ಮೂರನೆಯ ಮಾರ್ಚಿಗಿಂತ ಆರು ವರ್ಷ ಹಿಂದೆ ಎಂದು ನಿಗದಿಮಾಡಿದ್ದಾರೆ. 1-11-1956ರಿಂದ ತೆಗೆದುಕೊಂಡರೆ ಉತ್ತಮ; ಹಿಂದಿನ ವ್ಯಾಜ್ಯಗಳು ಬರಲು ಅವಕಾಶವಿರುವುದಿಲ್ಲ. ಹೀಗೆ ಮಾಡಬೇಕೆಂದು ನನ್ನ ಸಲಹೆ.

ಒಂದನೆಯ ಅಧ್ಯಾಯದಲ್ಲಿ ಸ್ವಂತ ಸಾಗುವಳಿಗೆ ಅರ್ಥ ಕೊಟ್ಟಿದ್ದಾರೆ. ಈ ಅರ್ಥ ವಿವರಣೆ ಅಷ್ಟು ಸ್ಪಷ್ಟವಾಗಿಲ್ಲವೆನಿಸುತ್ತದೆ. ಜಮೀನಿನಲ್ಲಿ ವ್ಯವಸಾಯಕ್ಕೆ ಸಂಬಂಧಪಟ್ಟ ಯಾವುದಾದರೂ ಕಾರ್ಯಾಚರಣೆ ನಡೆಸಬಹುದೆಂದಿದೆ. ಈ ವಾಕ್ಯ ಖಂಡಿತವಾಗಿಯೂ ಇರಬಾರದೆಂದು ಹೇಳುತ್ತೇನೆ. ಜಮೀನಿನವನು ದೊಡ್ಡಮನುಷ್ಯನಾಗಿ ಮುಂದಳಾಗಿರಬಹುದು, ಜಮೀನಿನಲ್ಲಿ ಬೇರೆ ಯಾವುದಾದರೂ ಕಾರ್ಯಮಾಡಬಹುದೆಂದಿದ್ದರೆ, ಸುಮ್ಮನೆ ಅವನು ಜಮೀನಿನಲ್ಲಿ ಹಾದು ಹೋಗಿ ವಕಾಲತ್ತು ನಡೆಸುತ್ತಾ ಬರಬಹುದು ದುಡಿಮೆ ಕೆಲಸದಿಂದಾಗಲಿ ಜಾನುವಾರುಗಳ ಮೂಲಕವಾಗಲಿ ಅಥವಾ ಯಂತ್ರ ಸಹಾಯದಿಂದ ವ್ಯವಸಾಯದ ಉತ್ಪನ್ನವನ್ನು ಬೆಳೆಯುವ ಅಥವಾ ಅಭಿವೃದ್ಧಿಗೊಳಿಸುವ ಇತ್ಯಾದಿ ಇರಬಹುದು. ಆದರೆ ಯಾವುದಾದರೂ ಕಾರ್ಯಾಚರಣೆಯನ್ನು ನಡೆಸುವುದು ಎಂದು ಹೇಳಿದರೆ ಬಹಳ ಕಷ್ಟವಾಗುತ್ತದೆ. ಹೀಗೆ ಮಾಡಿದರೆ ಬೇರೆಯವರಿಗೆ ಭೂಮಿ ಸಿಕ್ಕುವುದಿಲ್ಲ. ಒಂದನೇ ಅಧ್ಯಾಯದ ಎರಡನೇ ಪ್ರಕರಣದ 11 (iii)ನೆಯ ಖಂಡದಲ್ಲಿ

> ''ತಾನೇ ಸ್ವಂತವಾಗಿಯಾಗಲಿ ಅಥವಾ ಅವನ ಕುಟುಂಬದ ಯಾವ ಮನುಷ್ಯನೇ ಆಗಲಿ ಖುದ್ದಾಗಿ ಮೇಲ್ವಿಚಾರಣೆ ನೋಡಿಕೊಳ್ಳುವ ಮೂಲಕ ಕೂಲಿ ಕೊಟ್ಟು ಕೆಲಸ ಮಾಡಿಸುವ ಮೂಲಕ ಅಥವಾ ಹಣದ ರೂಪದಲ್ಲಿ ಅಥವಾ ಧಾನ್ಯದ ರೂಪದಲ್ಲಿ ಕೊಡಬಹುದಾದ ಕೂಲಿಯ ಮೇಲೆ ಆಗರೆ ಬೆಳೆಯಲ್ಲಿ ಪಾಲಿಗೆ ಅವಕಾಶವಿಲ್ಲದಂತೆ ತಾನೇ ಸ್ವಂತವಾಗಿ ಜಮೀನನ್ನು ಸಾಗುವಳಿ ಮಾಡುವುದು ಎಂದು ಅರ್ಥ''

ಹೀಗಿರಬಾರದು. ತಾನೇ ಸ್ವಂತವಾಗಿ ಅಥವಾ ಅವನ ಕುಟುಂಬದ ಮನುಷ್ಯ ಯಾವನಾಗಲಿ ನೋಡಿಕೊಳ್ಳುವುದರ ಮೂಲಕ ಎಂದಿರಬೇಕು. ಯಾವಾಗಲೋ ಒಂದು ದಿವಸ ಸೈಕಲ್ ಸವಾರಿ ಮಾಡಿಕೊಂಡು ಜಮೀನಿನ ಹತ್ತಿರ ಹೋಗಬಹುದು. ಇಷ್ಟಾದರೆ ಸಾಲದು, ಹೀಗಿರಬಾರದು.

ಇನ್ನು ಗೇಣಿದಾರ ಎಂಬ ಭಾಗದಲ್ಲಿ ಎಲ್ಲವನ್ನು ಹೇಳಿದ್ದಾರೆ. ಆದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಚಾಲ ಗೇಣಿದಾರರೆಂದಿದ್ದಾರೆ. ಇಂಥವರನ್ನು ಸ್ಪಷ್ಟವಾಗಿ ಸೂಚಿಸಬೇಕಾಗಿತ್ತು.

(ಶ್ರೀ ಎಸ್. ಸುಬ್ಬಯ್ಯನಾಯಕ್)

ಹೀಗೆ ಸ್ಪಷ್ಟವಾಗಿ ಹಾಕದೇಯಿರುವುದರಿಂದ ಕಾನೂನು ತಜ್ಞರಿಗೆ ತೊಂದರೆಯಾಗುತ್ತದೆ. 'ಚಾಲಗೇಣಿದಾರ' ಎಂದು ಸ್ಪಷ್ಟವಾಗಿರಬೇಕಾಗಿತ್ತು.

ಶ್ರೀ ಕಡಿದಾಳ್ ಮಂಜಪ್ಪ.—ಗೇಣಿದಾರ ಎಂದರೆ ಚಾಲ ಗೇಣಿದಾರ ಎಂದೂ ಅರ್ಥವಾಗುತ್ತದೆ.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಅಂತೂ ಇದು ಸ್ಪಷ್ಟವಾಗಿರಬೇಕಾಗಿತ್ತು.

೯ನೇ ಕ್ಲಾಜ್‌ನಲ್ಲಿ ಗೇಣಿ ವಿಚಾರ ಹೇಳಿರುತ್ತಾರೆ. ಬೊಂಬಾಯಿ ಕರ್ನಾಟಕ, ಹೈದರಾಬಾದ್ ಕರ್ನಾಟಕದಲ್ಲಿ 1/6 ಭಾಗ ಇತ್ತು ಎಂದು ಹೇಳುತ್ತಾರೆ. ಅದೇ ನಮ್ಮಲ್ಲೂ ಮಾಡಿದ್ದರೆ ಒಳ್ಳೆಯದಿತ್ತು ಎಂದು ಹೇಳುತ್ತೇನೆ. ಅದರೆ ಒಂದೇ ಬದಿಯಿಂದ ನೋಡಿದರೆ ಸಾಲದು ಎರಡೂ ಬದಿಯಿಂದ ನೋಡಬೇಕೆಂದು ಹೇಳುತ್ತೇನೆ. 1/4—1/5 ಅಂಶವನ್ನು ಪೂರ್ಣವಾಗಿ ಒಪ್ಪುತ್ತೇನೆ. ಈ ಸಂದರ್ಭದಲ್ಲಿ ಒಂದು ಮಾತು ಹೇಳಬೇಕು. ಇದರಲ್ಲಿ ಒಟ್ಟು ಬೆಳೆಯಲ್ಲಿ ¼ ಅಂಶ 1/5 ಅಂಶ ಅಂದರೆ ಕಷ್ಟವಾಗುತ್ತದೆ. ಹುಲ್ಲು ಪೈರು ಸಹ ಅದರಲ್ಲಿ ಬರುತ್ತದೆ. ಅದರಿಂದ ಮುಖ್ಯವಾದ ಬೆಳೆ ಎಂದು ಇರಬೇಕೆಂದು ಒತ್ತಿ ಹೇಳುತ್ತೇನೆ.

31ನೇ ಕ್ಲಾಜ್‌ನಲ್ಲಿ ಅರ್ಥ ವಿವರಣೆ ಸರಿಯಾಗಿ ಮಾಡಿಲ್ಲ. "ಹೊಲದಲ್ಲಿ (ವ್ಯವಸಾಯದ ಜಮೀನಿನಲ್ಲಿ) ವಾಸದ ಮನೆಯನ್ನು ಕಟ್ಟಿಕೊಳ್ಳಲು ಗೇಣಿದಾರನಿಗೆ ಇರತಕ್ಕ ಹಕ್ಕು.—ಒಬ್ಬ ಗೇಣಿದಾರನು, ತಾನು ಗೇಣಿದಾರನಾಗಿ ಹೊಂದಿರುವ ಭೂಮಿಯಲ್ಲಿ, ಹಿಡುವಳಿಯ ಅನುಕೂಲವಾದ ಅಥವಾ ಲಾಭದಾಯಕವಾದ ಉಪಯೋಗದ ಅಥವಾ ಅನುಭವದ ಸಲುವಾಗಿ ಸಮಂಜಸವಾಗಿ ಆವಶ್ಯಕವಾದ ಒಂದು ವಾಸದ ಮನೆಯನ್ನು ಕಟ್ಟಿಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು" ಎಂದು ಹೇಳಿರುತ್ತಾರೆ. ಇನ್ನು ಹೆಚ್ಚು ವಿವರ ಬೇಕಾಗಿತ್ತು. ವ್ಯವಸಾಯಕ್ಕೆ ಬೇಕಾಗುವ ದನಗಳ ಹಟ್ಟಿ, ಕೊಟ್ಟಿಗೆ, ಬಚ್ಚಲು ಇತ್ಯಾದಿ ಉಪ ಕಟ್ಟಡಗಳನ್ನು ಕಟ್ಟಲಿಕ್ಕೂ ಹಕ್ಕು ಉಳ್ಳವನಾಗಿರಬೇಕು ಎಂದು ಸೂಚಿಸುತ್ತೇನೆ.

Sri J. B. MALLARADHYA.—Reasonably required for the Convenient or profitable use or occupation of the holding ಎಂದು ಇಂಗ್ಲೀಷಿನಲ್ಲಿ ಇದೆ. ಅದು ಚೆನ್ನಾಗಿದೆ. ಅದರ ಭಾಷಾಂತರ ಸರಿಯಾಗಿಲ್ಲವೋ ಏನೋ ಗೊತ್ತಿಲ್ಲ.

ಶ್ರೀ ಎಸ್. ಸುಬ್ಬಯ್ಯನಾಯಕ್.—ಕನ್ನಡದಲ್ಲಿ ಆ ರೀತಿ ಸರಿಯಾದ ವಿವರಣೆ ಬಂದಿಲ್ಲ ಎಂದು ಹೇಳುತ್ತೇನೆ. ಯಾವುದರಲ್ಲೇ ಆಗಲೀ ಆ ರೀತಿಯಾದ ಅರ್ಥ ವಿವರಣೆ ಬರಬೇಕು.

ಇನ್ನು ಪರಿಹಾರ.—ಈ 47ನೇ ಕ್ಲಾಜ್ ಬಹಳವಾಗಿ ಚರ್ಚೆಗೆ ಈಡಾದಂತಹ ಕ್ಲಾಜು. ¼—1/5 ಅಂಶದ 15 ರಷ್ಟು ಪರಿಹಾರ ಕೊಡಬೇಕೆಂದು ಇದರಲ್ಲಿ ಹೇಳಿದ್ದೀರಿ. ನಾನು ಇದು 12 ರಷ್ಟು ಇದ್ದರೂ ಆಗಬಹುದೆಂದು ಹೇಳುತ್ತೇನೆ. ಏಕೆಂದರೆ ಸಾಧಾರಣವಾಗಿ ನಮ್ಮ ಜಿಲ್ಲೆಯಲ್ಲಿ ಮಾತ್ರ ನಾನು ಲೆಕ್ಕ ಹಾಕಿದ್ದೇನೆ. ಒಂದು ಮುಡಿ ಎಂದರೆ 42 ಸೇರು. ನಾಲ್ಕು ಕಳಸೆ ಎಂದರೆ 56 ಸೇರು ಆಗುತ್ತದೆ. ಒಂದು ಎಕರೆಗೆ 14 ಮುಡಿ ಬತ್ತ ಉತ್ಪತ್ತಿ ಆಗುತ್ತದೆ. ಎಕರೆಗೆ 10 ರೂಪಾಯಿ ಕಂದಾಯ ಹೋಗಲಾಗಿ ಒಂದು ಮುಡಿಗೆ 10 ರೂಪಾಯಿಯಂತೆ 13 ಮುಡಿಗೆ 130 ರೂಪಾಯಿ ಅದರ 12 ಪಟ್ಟು ಎಂದರೆ 1,560 ರೂಪಾಯಿ ಆಗುತ್ತದೆ. ಒಂದು ಎಕರೆಗೆ ಆಗುತ್ತದೆ. ಅನಂತರ ಮರದ ಬೆಲೆ ಮನೆಯ ಬೆಲೆ ಅರ್ಧ ಅಂಶ ಕೊಡಬೇಕೆಂದಿದೆ. ಮರದ ಬೆಲೆ 500 ರೂಪಾಯಿ. ಮನೆಯ ಬೆಲೆ ಸುಮಾರು 500 ರೂಪಾಯಿ ಅದರೆ 1,000 ರೂಪಾಯಿ ಆಗುತ್ತದೆ. ಒಂದು ಎಕರೆಗೆ ಅಲ್ಲಿಗೆ 12 ಪಟ್ಟು ಕೊಟ್ಟರೂ 2,560 ರೂಪಾಯಿ ಆಗುತ್ತದೆ. ನಮ್ಮ ಕಡೆಯಲ್ಲಿ ಎಂಥ ಸಣ್ಣ ಹಿಡುವಳಿ ಇದ್ದರೂ ಒಂದು ಮನೆ ಇದ್ದೇ ಇರುತ್ತದೆ. ನಾಲ್ಕು ಅಥವಾ ಎಂಟು ಎಕರೆ ಇದ್ದರೆ ಹೆಚ್ಚು ಮನೆಗಳು ಇರುತ್ತವೆ. ಅದು ಮಾತ್ರವಲ್ಲ ಧನಿ ಮಾಡಿಸಿದ ಕೆರೆ, ಕಟ್ಟೆ, ಕಾಲುವೆ

ಅಥವಾ ಬೇರೆ ಏನಾದರೂ ಅಭಿವೃದ್ಧಿ ಕೆಲಸ ಕಾರ್ಯಗಳನ್ನು ಮಾಡಿಸಿದ್ದರೆ ಅವಕ್ಕೂ ಸಹ ಪರಿಹಾರ ಕೊಡಬೇಕಾಗುತ್ತದೆ. ಹೀಗಿರುವಾಗ 15 ಪಟ್ಟು ಕೊಡುವುದಾದರೆ ಬಹಳ ಹೆಚ್ಚಾಗುತ್ತದೆ. ಆದ್ದರಿಂದ 12 ಪಟ್ಟು ಇರುವಂತೆ ಮಾಡಿದರೆ ಒಳ್ಳೆಯದು ಎಂದು ಕತೆಯುವರೂ ಉಳಿಯುತ್ತಾರೆ ಎಂದು ಹೇಳುತ್ತೇನೆ.

ಮೂಲ ಹಿಡುವಳಿಯಲ್ಲಿ, 2 ಸ್ಟಾಂಡರ್ಡ್ ಎಕರೆ ಒಂದು ಮೂಲ ಹಿಡುವಳಿಯಾಗುತ್ತದೆ ಎಂದು ಅರ್ಥ ವಿವರಣೆಯಲ್ಲಿ ಹೇಳಿದ್ದೀರಿ. ನಮ್ಮಲ್ಲಿ ನಾಲ್ಕು ಸ್ಟಾಂಡರ್ಡ್ ಎಕರೆ ಇರಲಿ ಎಂದು ಹೇಳುತ್ತೇನೆ. ಏಕೆಂದರೆ ನಮ್ಮಲ್ಲಿ ಶೇಕಡ 66 ಕ್ಕಿಂತಲೂ ಹೆಚ್ಚು ಮಂದಿ ಒಕ್ಕಲುಗಳು ಇದ್ದಾರೆ. ಆದ್ದರಿಂದ ಹೆಚ್ಚು ತಬ್ಬಿಬ್ಬು ಆಗುವುದಿಲ್ಲ. ಅದಲು ಬದಲು ಆಗುವುದಿಲ್ಲ. ಒಕ್ಕಲನ ಭೂಮಿ ಒಕ್ಕಲನ ಕೈಯಲ್ಲೇ ಮುಂದುವರಿಯುತ್ತದೆ.

ಇನ್ನು ಕುಟುಂಬ ಹಿಡುವಳಿ ಎಷ್ಟಿರಬೇಕು ಎಂಬ ಬಗ್ಗೆ ನನ್ನ ಅಭಿಪ್ರಾಯ ಮೂಲ ಹಿಡುವಳಿಯ ಮೂರು ಪಟ್ಟು ಕುಟುಂಬ ಹಿಡುವಳಿ ಇದ್ದರೆ ಅಷ್ಟು ಭೂ ವಿಸ್ತೀರ್ಣ ಸಾಕು ಎಂದು ನನಗೆ ಅನ್ನಿಸುತ್ತದೆ. ಈ ರೀತಿ ಮಾಡಿದರೆ ಎಲ್ಲರಿಗೂ ಭೂಮಿಯನ್ನು ಒದಗಿಸಲಿಕ್ಕೆ ಅನುಕೂಲವಾಗುತ್ತದೆ. ಮತ್ತು ಈಗ ನಾವು ಮಾಡಬೇಕೆಂದಿರುವ ಭೂಸುಧಾರಣೆಯ ಉದ್ದೇಶ ನೆರವೇರುತ್ತದೆ.

ಇನ್ನು ಕಲಮು 63(2) (c) ನಲ್ಲಿ ಕೆಲವೊಂದು ಭೂಮಿಯ ಬಗ್ಗೆ ವಿನಾಯಿತಿ ಕೊಟ್ಟಿದ್ದಾರೆ. ಈ ರೀತಿ ವಿನಾಯಿತಿ ಕೊಟ್ಟರೆ ಭೂಮಿಯಲ್ಲಿ ಇಲ್ಲಿಯವರೆಗೆ ದುಡಿಯುತ್ತಿರುವ ಒಕ್ಕಲುಗಳ ಉಚ್ಚಾಟನೆಯಾಗದಂತೆ ನೋಡಿಕೊಳ್ಳಬೇಕಾಗುತ್ತದೆ.

ಶ್ರೀ ಕಡಿದಾಳ್ ಮಂಜಪ್ಪ.—ಸ್ವಂತ ಸಾಗುವಳಿ ಮಾಡುತ್ತಿರುವಂಥ ಜಮೀನುಗಳಿಗೆ ಮಾತ್ರ ವಿನಾಯಿತಿ ಕಲ್ಪಿಸಿರುವುದು. ಆದ್ದರಿಂದ ಯಾವ ಒಕ್ಕಲುಗಳ ಉಚ್ಚಾಟನೆಯಾಗುವುದಿಲ್ಲ.

ಶ್ರೀ ಎಸ್. ಸುಬ್ಬಯ್ಯನಾಯಕ್.—ವಿನಾಯಿತಿ ಬೇಕು ಎಂದು ಎಲ್ಲರೂ ಹೇಳುತ್ತಾರೆ. ಆದರೆ ಒಕ್ಕಲುಗಳಿಗೆ ಅನುಕೂಲವಾಗುವಂತೆ ಮಾಡಬೇಕೆಂದು ಮಾತ್ರ ನಾನು ಹೇಳುತ್ತೇನೆ.

ಇನ್ನು ಕರಿ ಮಣಸಿನ ಸಂಬಂಧದಲ್ಲಿ ಪರಮಾವಧಿ ವಿಸ್ತೀರ್ಣ 25 ಎಕರೆ ಎಂದು ಇರುವುದು ಸಾಲದು. 25 ಎಕರೆ ಎಂದು ಮಾಡಿದರೆ ಕಷ್ಟವಾಗುತ್ತದೆ. ಪರಮಾವಧಿ ವಿಸ್ತೀರ್ಣ 50 ಎಕರೆ ಮಾಡಬೇಕೆಂದು ನಾನು ಸೂಚಿಸುತ್ತೇನೆ.

ಈ ಮಸೂದೆಯಲ್ಲಿ ಕಲಮು 127ನೆಯದು ಬಡ ಒಕ್ಕಲುಗಳಿಗೆ ಕಾನೂನು ಸಹಾಯ ಒದಗಿಸಬೇಕೆಂಬುದು. ಬಡವರಿಗೆ ಅಂದರೆ ಗೇಣಿದಾರರಾಗಲಿ ಸಣ್ಣ ಹಿಡುವಳಿದಾರರಾಗಲೀ, ಯಾರ ಕೈಯಲ್ಲಿ ಖರ್ಚು ಮಾಡುವುದಕ್ಕೆ ಹಣವಿರುವುದಿಲ್ಲವೋ ಅಂಥವರಿಗೆ ಸಹಾಯ ಒದಗಿಸಲಿಕ್ಕೇಬೇಕು. ಅಂಥ ಬಡವರಿಗೆ ಹಣದ ಸಹಾಯ ಮೊದಲು ಮಾಡಿ ಆಮೇಲೆ ಅವರಿಂದ ಆ ಹಣವನ್ನು ಕಂತು ಮೂಲಕ ವಸೂಲು ಮಾಡಲಿಕ್ಕೆ ಬರುತ್ತದೆ. ಇಂಥ ಸಹಾಯ ಅವರಿಗೆ ಕೊಡಲಿಕ್ಕೇ ಬೇಕು.

ಇನ್ನು ಮತ್ತೊಂದು ಮಾತನ್ನು ಅಂದರೆ ಅಳಿಯ ಸಂತಾನದ ಬಗ್ಗೆ ನಮ್ಮ ಜಿಲ್ಲೆಯ ಎಲ್ಲ ಮಾನ್ಯ ಸದಸ್ಯರು ಹೇಳುತ್ತಾರೆ. ಅಳಿಯ ಸಂತಾನದ ಪದ್ಧತಿಯು ನೂರಾರು ವರ್ಷಗಳಿಂದ ಬಂದಿದೆ. ಅಳಿಯ ಸಂತಾನಿಕರಲ್ಲಿ ಭೂ ಮಾಲಕರಿಗಿಂತ ಗೇಣಿದಾರರ ಪ್ರಮಾಣ ಸಂಖ್ಯೆಯೇ ಅಧಿಕ. ಇದರ ಸಾಧಕ ಬಾಧಕ ಇತರ ಕಡೆಗಳಂತೆಯೇ ಇಲ್ಲಿಯೂ ಸಮವಾದವು. ಈ ವಿಚಾರದಲ್ಲಿ ಯಾರಿಗೂ ತೊಂದರೆಯಾಗದಂತೆ ಮಾಡುವುದು ಒಳ್ಳೆಯದು.

ನನಗೆ ಮಾತನಾಡಲು ಕೊಟ್ಟಿರುವ ಸಮಯ ಮುಗಿಯುತ್ತ ಬಂದಿದೆ. ಹೆಚ್ಚಿಗೆ ಹೇಳಲು ಇಚ್ಛಿಸುವುದಿಲ್ಲ. ಕೊನೆಯದಾಗಿ ಒಂದು ಮಾತನ್ನು ಮಾತ್ರ ಹೇಳಲು ಇಷ್ಟಪಡುತ್ತೇನೆ. ಈ ಕಾನೂನು ಬೇಗನೆ ಜಾರಿಗೆ ಬರುವ ಹಾಗೆ ಮಾಡಬೇಕೆಂದು ಅತಿ ವಿನಯದಿಂದ ಕೇಳಿಕೊಳ್ಳುತ್ತೇನೆ

(ಶ್ರೀ ಎಸ್. ಸುಬ್ಬಯ್ಯಸಾಹುಕ್)

ರೂಲ್ಸ್ ಜಾರಿಗೆ ತರುವಾಗ್ಗೆ ಮಾನನೀಯ ಹಿತದೃಷ್ಟಿಯಿಂದ ಒಕ್ಕಲುಗಳಿಗೆ ಸಹಾಯವಾಗುವ ಹಾಗೆ ಅನುಕೂಲವಾಗುವ ರೀತಿಯಲ್ಲಿ ಮಾಡುವದಾದರೆ ಈ ಕಾನೂನಿನಿಂದ ಪ್ರಯೋಜನವಾಗಿ ಇಷ್ಟಸಿದ್ಧಿಯಾಗುತ್ತದೆ. ಇಲ್ಲದಿದ್ದರೆ ವ್ಯರ್ಥವಾಗಿ ವ್ಯಾಜ್ಯವುಂಟಾಗಿ ಉಭಯ ಪಕ್ಷಗಳ ಐಶ್ವರ್ಯವೂ ಆಯುಷ್ಯವೂ ಸವೆಯುವುದಲ್ಲದೆ ಅನರ್ಥವುಂಟಾದೀತು ! ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕೆ ಅಧ್ಯಕ್ಷರಿಗೆ ನನ್ನ ಕೃತಜ್ಞತೆಗಳನ್ನು ಅರ್ಪಿಸಿ, ಈ ವಿಧೇಯಕವನ್ನು ತಂದಿರುವ, ಮೂರ್ತಿ ಸಣ್ಣದಾದರೂ ಕೀರ್ತಿ ದೊಡ್ಡದಾಗಿರುವ, ಕಂದಾಯ ಮಂತ್ರಿಗಳಾದ ಶ್ರೀ ಕಡಿದಾಳ್ ಮಂಜಪ್ಪನವರಿಗೆ ನಮ್ಮ ದೇಶದ ವಿಚಾರವಾದ ಕೀರ್ತಿ ಹೆಚ್ಚಾಗಲಿ ಎಂದು ಹಾರೈಸುತ್ತೇನೆ.

Mr. SPEAKER.—The House will now adjourn to meet again at one of the Clock on Monday the 4th September 1961.

The House adjourned at Twenty Five Minutes past Twelve of the Clock to meet again at One of the Clock on Monday, the 4th September 1961.

W! CC32—GPB—5C0—(L.A. New)—30-3-67